## ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

**ನಂ.16-ಡಿ, ದೇವರಾಜ ಅರಸು ಭವನ, 4ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು-52**

* * *

## 2014-15ನೇ ಸಾಲಿನ ಆಯವ್ಯಯ ವಿವರ ಹಾಗೂ ಕ್ರಿಯಾ ಯೋಜನೆ

ರಾಜ್ಯ ಸರ್ಕಾರವು 2014-15ನೇ ಸಾಲಿನ ಆಯವ್ಯಯದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ರೂ. 13430.87ಲಕ್ಷಗಳನ್ನು ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಈ ಕೆಳಕಂಡ ಲೆಕ್ಕ ಶೀರ್ಷಿಕೆಯಲ್ಲಿ ಒದಗಿಸಿರುತ್ತದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರು ರೂ.2600.00 ಲಕ್ಷಗಳನ್ನು ಈ ನಿಗಮಕ್ಕೆ ಹಂಚಿಕೆ ಮಾಡಿರುತ್ತಾರೆ, ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿ ಯೋಜನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಒದಗಿಸುವ ಮೊತ್ತ ರೂ.1000.00ಲಕ್ಷಗಳು, 2013-14ನೇ ಸಾಲಿನ ರಾಜ್ಯ ಸರ್ಕಾರದ ಪೂರಕ ಆಯವ್ಯಯದಲ್ಲಿ ಕುರಿ ಸಾಕಾಣಿಕೆ ಮತ್ತು ಕಂಬಳಿ ನೇಯ್ಗೆ ಮಾಡುವ ಕುರುಬ ಸಮಾಜದವರಿಗೆ ರೂ.960.00ಲಕ್ಷ ಹಾಗೂ ಅರಿವು-ಶೈಕ್ಷಣಿಕ ನೇರ ಸಾಲ ಯೋಜನೆಗೆ ಒದಗಿಸಿದ ರೂ.876.00ಲಕ್ಷಗಳಲ್ಲಿ ಈಗಾಗಲೇ ವೆಚ್ಚ ಮಾಡಿದ ರೂ.34.29ಲಕ್ಷಗಳನ್ನು ಹೊರತು ಪಡಿಸಿ, ರೂ.842.00ಲಕ್ಷಗಳು ಸೇರಿ ಹೀಗೆ ಒಟ್ಟು ರೂ. 18832.87ಲಕ್ಷಗಳಲ್ಲಿ 35,800 ಹಿಂದುಳಿದ ವರ್ಗಗಳ ಜನರಿಗೆ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆಯನ್ನು ರೂಪಿಸಿದೆ. ರಾಜ್ಯ ಸರ್ಕಾರವು ಒದಗಿಸಿದ ಲೆಕ್ಕಶೀರ್ಷಿಕೆವಾರು ಹಣದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಹಣ |
|---|---|---|
| I<br>1 | **ರಾಜ್ಯ ಸರ್ಕಾರದಿಂದ:**<br>ಷೇರು ಬಂಡವಾಳ/ಸಾಲ ಯೋಜನೆಗಳ ಅನುಷ್ಠಾನ<br>4225-03-190-0-01 | 3000.00 |
| 2 | ಸಹಾಯ ಧನ (2225-03-190-0-04) | 1000.00 |
| 3 | ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕಸುಬುದಾರರಿಗೆ ಆರ್ಥಿಕ ನೆರವು (2225-03-190-0-03) | 2930.87 |
| 4 | ಗಂಗಾ ಕಲ್ಯಾಣ ಸಾಮೂಹಿಕ/ವೈಯುಕ್ತಿಕ ನೀರಾವರಿ ಯೋಜನೆ (2225-03-102-0-10) | 6500.00 |
| | **ಒಟ್ಟು** | **13430.87** |
| 5 | **2013-14ನೇ ಸಾಲಿನ ಪೂರಕ ಆಯವ್ಯಯದಲ್ಲಿ ಯೋಜನವಾರು ಒದಗಿಸಿದ ಮೊತ್ತದಲ್ಲಿ ಉಳಿಕೆ ಮೊತ್ತ** | |
| | 1. ಕುರಿ ಸಾಕಾಣಿಕೆ/ಕಂಬಳಿ ನೇಯ್ಗೆ ಯೋಜನೆ (2225-03-190-0-04) | 960.00 |
| | 2. ಅರಿವು-ಶೈಕ್ಷಣಿಕ ನೇರ ಸಾಲ ಯೋಜನೆ (6625-03-800-0-02) | 842.00 |
| | **ಒಟ್ಟು** | **1802.00** |
| II | ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ನೇರ ಸಾಲ ಯೋಜನೆಗಳು | 2600.00 |
| III | ಹಿಂದುಳಿದ ವರ್ಗ ಕಲ್ಯಾಣ ಇಲಾಖೆಯಿಂದ 2013-14ನೇ ಸಾಲಿನಲ್ಲಿ ಮಾರ್ಚ್-14ರ ಅಂತ್ಯದಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿ ಯೋಜನೆಗೆ ಒದಗಿಸಿದ ಮೊತ್ತದಲ್ಲಿ ಖರ್ಚಾಗದೆ ಉಳಿದ | 1000.00 |

| | | |
|---|---|---|
| | ಮೊತ್ತ | |
| | Grand Total | **18832.87** |

## ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು

## 2014-15 ನೇ ಸಾಲಿನ ಕ್ರಿಯಾ ಯೋಜನೆ

(ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಯೋಜನೆ ಮತ್ತು ಆಯವ್ಯಯ ದಲ್ಲಿ ಒದಗಿಸಿದ ಮೊತ್ತ | ಆಯವ್ಯಯ ದಲ್ಲಿ ಒದಗಿಸಿದ ಮೊತ್ತ | ಕಾರ್ಯಕ್ರಮ | ಭೌತಿಕ ಗುರಿ | ಆರ್ಥಿಕ ಗುರಿ | | | |
|---|---|---|---|---|---|---|---|---|
| | | | | | ಸಹಾಯಧನ | ಸಾಲ | ಎನ್.ಬಿ.ಸಿ | ಒಟ್ಟು |
| 1 | 2 | 3 | 4 | 5 | 6 | 7 | 8 | 9 |
| .1 | ಷೇರು ಬಂಡವಾಳ 4225-03-190-0-01 | 3000.00 | 1. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ | 4000 | 400.00 | 1100.00 | - | 1500.00 |
| | | | 2.ಚೈತನ್ಯ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ | 4880 | 488.00 | 1346.00 | - | 1834.00 |
| 2 | ಸಹಾಯಧನ 2225-03-190-0-04 | 1000.00 | 3. ಕಿರು ಸಾಲ ಯೋಜನೆ | 2240 | 112.00 | 224.00 | - | 336.00 |
| | | | 4.ಅರಿವು/ಶೈಕ್ಷಣಿಕ ಸಾಲ (ನವೀಕರಣ) | 160 | 0 | 80.00 | - | 80.00 |
| | | | 5.ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ | 15 | 0 | 50.00 | - | 50.00 |
| | | | 6.ಎನ್.ಬಿ.ಸಿ.ಎಫ್.ಡಿ.ಸಿ. ಯೋಜನೆಗಳಿಗೆ ನಿಗಮದ ಪಾಲಿನ ಮೊತ್ತ | 0 | - | 200.00 | - | 200.00 |
| | **ಒಟ್ಟು** | **4000.00** | **ಒಟ್ಟು** | **11295** | **1000.00** | **3000.00** | **-** | **4000.00** |
| 3 | ಸಾಂಪ್ರದಾಯಿಕ ಕುಶಲ ಕರ್ಮಿಗಳ ಹಾಗೂ ವೃತ್ತಿ ಕಸುಬುದಾರರಿಗೆ ಆರ್ಥಿಕ ನೆರವು 2225-03-190-0-03 | 2930.87 | 1.ಸಾಂಪ್ರದಾಯಿಕ ವೃತ್ತಿದಾರರ ಕುಶಲ ಕರ್ಮಿಗಳ ಸಾಲ | 6453 | - | 2580.87 | - | 2580.87 |

| ಕ್ರ ಸಂ | ಯೋಜನೆಗಳು | ಭೌತಿಕ | ಆರ್ಥಿಕ ಗುರಿ |
|---|---|---|---|
| 1 | ಸವಿತ/ಹಡಪದ ಸಮಾಜದ ವೃತ್ತಿಗಳು | 1437 | 575.00 |
| | ಮಡಿವಾಳ ಜನಾಂಗದ ವೃತ್ತಿಗಳು. | 1438 | 575.00 |
| | ತಿಗಳ ಜನಾಂಗದ ಹೂ ಕಟ್ಟುವ ವೃತ್ತಿ | 300 | 100.00 |
| | ಮೀನುಗಾರಿಕೆ | 125 | 50.00 |
| | ಬಡಗಿ ಮತ್ತು ಕೆತ್ತನೆ ಕೆಲಸ (ವಿಶ್ವಕರ್ಮ ಜನಾಂಗ ಹೊರತು ಪಡಿಸಿ) | 250 | 100.00 |
| | ನೇಕಾರಿಕೆ ವೃತ್ತಿ. | 500 | 200.00 |
| | ಇತರ ವೃತ್ತಿ ಕಸುಬುಗಳು | 1528 | 613.37 |
| | ಕಳ್ಳಭಟ್ಟಿ ಹಾಗೂ ಅಕ್ರಮ ಮದ್ಯ ತಯಾರಿಕೆಯಲ್ಲಿ ತೊಡಗಿ ಸಂತ್ರಸ್ತರಾದ ಕುಟುಂಬಗಳಿಗೆ ಸಾಲ | 875 | 367.50 |

<table>
<tr><td></td><td></td><td></td><td>2.ಕುಂಬಾರಿಕೆ ಅಭಿವೃದ್ಧಿಗೆ ಸಾಲ ಯೋಜನೆ</td><td>1167</td><td>-</td><td>350.00</td><td>-</td><td>350.00</td></tr>
<tr><td></td><td>ಒಟ್ಟು</td><td>2930.87</td><td></td><td>7620</td><td>-</td><td>2930.87</td><td>-</td><td>2930.87</td></tr>
<tr><td rowspan="6">4</td><td rowspan="6">ಗಂಗಾ ಕಲ್ಯಾಣ ನೀರಾವರಿ ಯೋಜನೆ 2225-03-102-0-10</td><td rowspan="6">6500.00</td><td>1. ವೈಯಕ್ತಿಕ ನೀರಾವರಿ</td><td>2192</td><td>3288.00</td><td>-</td><td>-</td><td>3288.00</td></tr>
<tr><td>2. ಸಾಮೂಹಿಕ ನೀರಾವರಿ (558 ಘಟಕ)</td><td>1952 ಜನ</td><td>1412.00</td><td>-</td><td>-</td><td>1412.00</td></tr>
<tr><td>3. ಏತ ನೀರಾವರಿ (30 ಘಟಕ)</td><td>300 ಜನ</td><td>300.00</td><td>-</td><td>-</td><td>300.00</td></tr>
<tr><td>4. ವಿದ್ಯುದ್ಧೀಕರಣ</td><td>-</td><td>1000.00</td><td>-</td><td>-</td><td>1000.00</td></tr>
<tr><td>5. ಗಂಗಾ ಕಲ್ಯಾಣ ಘಟಕಗಳಿಗೆ ಸಾಲ</td><td>-</td><td>300.00</td><td>-</td><td>-</td><td>300.00</td></tr>
<tr><td>6. ಕಾಯ್ದಿರಿಸಿದ ಮೊತ್ತ</td><td>-</td><td>200.00</td><td>-</td><td>-</td><td>200.00</td></tr>
<tr><td></td><td>ಒಟ್ಟು</td><td>6500.00</td><td>ಒಟ್ಟು</td><td>4445</td><td>6500.00</td><td></td><td></td><td>6500.00</td></tr>
<tr><td></td><td>ಒಟ್ಟು ಮೊತ್ತ (1+2+3+4)</td><td>13430.87</td><td>ಒಟ್ಟು ಮೊತ್ತ</td><td>23360</td><td>7500.00</td><td>5930.87</td><td>-</td><td>13430.87</td></tr>
<tr><td rowspan="4">5</td><td rowspan="4">2013-14ನೇ ಸಾಲಿನ ಪೂರಕ ಆಯವ್ಯಯದಲ್ಲಿ ಮಾರ್ಚ್-14ರ ಅಂತ್ಯದಲ್ಲಿ ಒದಗಿಸಿದ ಮೊತ್ತದಲ್ಲಿ ಉಳಿಕೆ ಮೊತ್ತ</td><td rowspan="4">1802.00</td><td>1.ಕುರಿ ಸಾಕಾಣಿಕೆ/ಕಂಬಳಿ ನೇಯ್ಗೆ ಮಾಡುವ ಕುರುಬ ಸಮುದಾಯದವರಿಗೆ ಆರ್ಥಿಕ ನೆರವು.</td><td>960</td><td>-</td><td>842.00</td><td>-</td><td>842.00</td></tr>
<tr><td>ಅರಿವು-ಶೈಕ್ಷಣಿಕ ನೇರ ಸಾಲ</td><td></td><td></td><td></td><td></td><td></td></tr>
<tr><td><table>
<tr><td>ಕ್ರ ಸಂ</td><td>ಯೋಜನೆಗಳು</td><td>ಭೌತಿಕ</td><td>ಆರ್ಥಿಕ</td></tr>
<tr><td>1</td><td>ನವೀಕರಣ ವಿದ್ಯಾರ್ಥಿಗಳು</td><td>78</td><td>34.29</td></tr>
<tr><td>2</td><td>ಹೊಸ ವಿದ್ಯಾರ್ಥಿಗಳು</td><td>1615</td><td>807.71</td></tr>
<tr><td></td><td>ಒಟ್ಟು</td><td>1693</td><td>842.00</td></tr>
</table></td><td></td><td></td><td></td><td></td><td></td></tr>
<tr><td>ಒಟ್ಟು</td><td>2653</td><td>-</td><td>1802.00</td><td>-</td><td>1802.00</td></tr>
<tr><td></td><td>ಒಟ್ಟು ಮೊತ್ತ (1+2+3+4+5)</td><td>15232.87</td><td>Grand Tatol (1+2+3+4+5)</td><td>26013</td><td>7500.00</td><td>7732.87</td><td>-</td><td>15232.87</td></tr>
</table>

| | | | | | | | | |
|---|---|---|---|---|---|---|---|---|
| 6 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿ ಯೋಜನೆಗೆ ಒದಗಿಸಿದ ಮೊತ್ತ | 1000.00 | ವೈಯಕ್ತಿಕ ಗಂಗಾ ಕಲ್ಯಾಣ ನೀರಾವರಿ ಯೋಜನೆ | 325 | - | 650.00 | - | 650.00 |
| | | | ಭೂ ಖರೀದಿ ಯೋಜನೆ | 30 | - | 300.00 | - | 300.00 |
| | | | ಅರಿವು ಅಲೆಮಾರಿ ಶೈಕ್ಷಣಿಕ ಸಾಲ ಯೋಜನೆ | 100 | - | 50.00 | - | 50.00 |
| | **ಒಟ್ಟು** | **1000.00** | **ಒಟ್ಟು** | **455** | **-** | **1000.00** | **-** | **1000.00** |
| | Total (1+2+3+4+5+6) | | | **26468** | **7500.00** | **8732.87** | **-** | **16232.87** |
| 7 | ಎನ್.ಬಿ.ಸಿ.ಎಫ್.ಡಿ.ಸಿ. ಸಾಲ ಯೋಜನೆಗಳು | 2600.00 | **ಅವಧಿ ಸಾಲ ಯೋಜನೆಗಳು** | | | | | |
| | | | ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳು.(7.03%) | 614 | - | - | 182.75 | 182.75 |
| | | | ಸಣ್ಣ ವ್ಯಾಪಾರ(6.54%) | 571 | - | - | 170.00 | 170.00 |
| | | | ಸೇವಾ ವಲಯ(1.94%) | 171 | - | - | 51.00 | 51.00 |
| | | | ಸಾರಿಗೆ ವಲಯ(6.54) | 135 | - | - | 170.00 | 170.00 |
| | | | ನ್ಯೂ ಸ್ವರ್ಣಿಮಾ ಯೋಜನೆ (5.48%) | 500 | - | - | 142.50 | 142.50 |
| | | | **ಒಟ್ಟು** | **1991** | **-** | **-** | **716.25** | **716.25** |
| | | | **ಶೈಕ್ಷಣಿಕ ಸಾಲ ಯೋಜನೆ** | | | | | |
| | | | ಅ) ಭಾರತದಲ್ಲಿ(2.02%) | 62 | - | - | 52.50 | 52.50 |
| | | | ಆ) ವಿದೇಶದಲ್ಲಿ(0.43%) | 05 | - | - | 11.25 | 11.25 |
| | | | ಒಟ್ಟು | 67 | - | - | 63.75 | 63.25 |
| | | | ಸ್ವಯಂ ಸಕ್ಷಮ(0.65%) | 10 | - | - | 17.00 | 17.00 |
| | | | ಮೈಕ್ರೋ ಫೈನಾನ್ಸ್(21.13%) | 2034 | - | - | 549.25 | 549.25 |
| | | | ಮಹಿಳಾ ಸಮೃದ್ಧಿ(46.59%) | 5100 | - | - | 1211.25 | 1211.25 |
| | | | **ವಿಶೇಷ ಯೋಜನೆಗಳು** | | - | - | | |
| | | | ಕೃಷಿ ಸಂಪದ(1.14%) | 100 | - | - | 29.75 | 29.75 |
| | | | ಶಿಲ್ಪ ಸಂಪದ(0.49%) | 30 | - | - | 12.75 | 12.75 |
| | **ಒಟ್ಟು** | **2600.00** | **ಒಟ್ಟು** | **9332** | **-** | **-** | **2600.00** | **2600.00** |
| | **Grand Total (1+2+3+4+5+6+7)** | | **ಒಟ್ಟಾರೆ** | **35800** | **7500.00** | **8732.87** | **2600.00** | **18832.87** |

ವ್ಯವಸ್ಥಾಪಕ ನಿರ್ದೇಶಕರು

<table>
<tr><th>I. ರಾಜ್ಯ ಸರ್ಕಾರದ ಯೋಜನೆಗಳು</th><th colspan="2">II. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಗಳು (ಎನ್.ಬಿ.ಸಿ.ಎಫ್.ಡಿ.ಸಿ)</th></tr>
<tr><td rowspan="2">1. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್<br>2. ಚೈತನ್ಯ ಸ್ವಯಂ ಉದ್ಯೋಗ ನೇರಸಾಲ ಯೋಜನೆ<br>3. ಅರಿವು ಶೈಕ್ಷಣಿಕ ಸಾಲ ಯೋಜನೆ(ನವೀಕರಣ)<br>4. ಕಿರುಸಾಲ ಯೋಜನೆ<br>5. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಡ್ಡಿರಹಿತ ಸಾಲ ಯೋಜನೆ<br>6. ಸಾಂಪ್ರದಾಯಿಕ ವೃತ್ತಿದಾರರ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು.<br>7. ಕುಂಬಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು<br>8. ಕಳ್ಳಬಟ್ಟಿ ಹಾಗೂ ಅಕ್ರಮ ಮದ್ಯ ತಯಾರಿಕೆಯಲ್ಲಿ ತೊಡಗಿ, ಸಂತ್ರಸ್ತರಾದ ಕುಟುಂಬಗಳಿಗೆ ಆರ್ಥಿಕ ನೆರವು<br>9. ಗಂಗಾಕಲ್ಯಾಣ ನೀರಾವರಿ ಯೋಜನೆ<br>ಅ. ವೈಯಕ್ತಿಕ ಕೊಳವೆಬಾವಿ ನೀರಾವರಿ ಯೋಜನೆ<br>ಆ. ಸಾಮೂಹಿಕ ಕೊಳವೆಬಾವಿ ನೀರಾವರಿ ಯೋಜನೆ<br>ಇ. ಏತನೀರಾವರಿ ಯೋಜನೆ<br>ಈ. ತೆರೆದ ಬಾವಿ ಯೋಜನೆ<br>10. 2013-14ನೇ ಸಾಲಿನ ಪೂರಕ ಆಯವ್ಯಯದಲ್ಲಿ ಮಾರ್ಚ್-14ರ ಅಂತ್ಯದಲ್ಲಿ ಒದಗಿಸಿದ ಮೊತ್ತದಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳು.<br>1. ಕುರಿ ಸಾಕಾಣಿಕೆ/ಕಂಬಳಿ ನೇಕಾರಿಕೆಗಾಗಿ ಕುರುಬ ಸಮಾಜದವರಿಗೆ ಆರ್ಥಿಕ ನೆರವು ಯೋಜನೆ.<br>2. ಅರಿವು-ಶೈಕ್ಷಣಿಕ ನೇರ ಸಾಲ ಯೋಜನೆ.<br>11. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿ ಒದಗಿಸಿದ ಮೊತ್ತದಿಂದ ಅನುಷ್ಠಾನಗೊಳಿಸುವ ಯೋಜನೆಗಳು.<br>1. ವೈಯಕ್ತಿಕ ಗಂಗಾ ಕಲ್ಯಾಣ ನೀರಾವರಿ ಯೋಜನೆ.<br>2. ಭೂ ಖರೀದಿ ಯೋಜನೆ.<br>3. ಅಲೆಮಾರಿ ಅರಿವು-ಶೈಕ್ಷಣಿಕ ನೇರ ಸಾಲ ಯೋಜನೆ.</td><td>1.</td><td>ಅವಧಿಸಾಲ ಯೋಜನೆ<br>ಅ) ಕೃಷಿ ವಲಯ<br>ಆ) ಸಣ್ಣವ್ಯಾಪಾರ<br>ಇ) ಸೇವಾವಲಯ<br>ಈ) ಸಾರಿಗೆವಲಯ<br>ಉ)ಶೈಕ್ಷಣಿಕ ಸಾಲ<br>ಊ)ಸ್ವಯಂ ಸಕ್ಷಮ ಸಾಲ<br>ಋ) ನ್ಯೂ ಸ್ವರ್ಣಿಮಾ ಸಾಲ<br>ಋ) ಮೈಕ್ರೋ ಫೈನಾನ್ಸ್<br>ಎ) ಶಿಲ್ಪ ಸಂಪದ<br>ಏ) ಕೃಷಿ ಸಂಪದ</td></tr>
<tr><td>2.</td><td>ಮಹಿಳಾ ಸಮೃದ್ಧಿ ಯೋಜನೆ (ಮಹಿಳಾ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು)</td></tr>
</table>

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 573 ಬಿಸಿಎ 95 ದಿನಾಂಕ: 23/02/1996 ಪ್ರಕಾರ ನಿಗಮದ ಎಲ್ಲಾ ಯೋಜನೆಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಶೇ.70ರಷ್ಟು ಭೌತಿಕ ಹಾಗೂ ಆರ್ಥಿಕ ಮತ್ತು ಪ್ರವರ್ಗ 3ಎ &3ಬಿಗೆ ಶೇ.30ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು.</u>**

## 1) ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ

1. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು(ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಹಾಗೂ ಕುಟುಂಗದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.
2. ಬ್ಯಾಂಕ್ ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.
3. ಸರ್ಕಾರದ ಆದೇಸ ಸಂಖ್ಯೆ:ಸಕಇ/165/ಬಿಎಂಎಸ್/2011 ದಿ:28/07/2011ರನ್ವಯ ಯೋಜನೆಯಲ್ಲಿ ಹಿಂದುಳಿದ ವರ್ಗಗಳ ಜನರಿಗೆ ಗರಿಷ್ಠ ರೂ.5.00 ಲಕ್ಷಗಳವರೆಗೆ ಸಾಲ ಒದಗಿಸಲಾಗುವುದು.
4. ಸಹಾಯಧನ ಶೇ.30ರಷ್ಟು ಅಥವಾ ರೂ.10,000/-ಗಳು. ರೂ.1.00ಲಕ್ಷಕ್ಕಿಂತ ಹೆಚ್ಚಿನ ಸಾಲಕ್ಕೆ ಸಹಾಯಧನ ಲಭ್ಯವಿಲ್ಲ.
5. ನಿಗಮದಿಂದ ಮಾರ್ಜಿನ್ ಹಣ ಶೇ. 20ರಷ್ಟು ಅಥವಾ ಗರಿಷ್ಟ ರೂ.1.00 ಲಕ್ಷಗಳು.
6. ಮಾರ್ಜಿನ್ ಹಣಕ್ಕೆ ವಾರ್ಷಿಕ ಶೇ.4ರ ಬಡ್ಡಿದರ.
7. ಉಳಿಕೆ ಮೊತ್ತ ಬ್ಯಾಂಕ್ ಪಾಲಿನ ಸಾಲ.
8. ಸಾಲದ ಉದ್ದೇಶ ಕೃಷಿ ಅವಲಂಬಿತ ಚಟುವಟಿಕೆಗಳು, ವ್ಯಾಪಾರ, ಸೇವಾವಲಯ ಮತ್ತು ಸಾರಿಗೆ ವಲಯದ ಉದ್ದೇಶಗಳು,
9. ಮಾರ್ಜಿನ್ ಹಣ ಸಾಲದ ಮರುಪಾವತಿ ಬ್ಯಾಂಕ್ ನಿಗದಿಪಡಿಸಿದ ಕಂತುಗಳನ್ವಯ.
10. ಆಯಾ ಬ್ಯಾಂಕ್ ಶಾಖೆಗೆ ನಿಗಧಿಪಡಿಸಿದ ಗುರಿಗೆ 1;3 ಅನುಪಾತದಲ್ಲಿ ಅರ್ಜಿ ಶಿಫಾರಸ್ಸು ಮಾಡುವುದು.
11. ರೂ.50,000/-ಗಳಿಗಿಂತ ಹೆಚ್ಚಿನ ಮಾರ್ಜಿನ್ ಹಣದ ಮರುಪಾವತಿ ಭದ್ರತೆಗೆ ಅರ್ಜಿದಾರರಿಂದ/ ಜಾಮೀನುದಾರರಿಂದ ಸ್ಥಿರಾಸ್ತಿ ಭದ್ರತೆ ಪಡೆಯಬೇಕು(Collateral Security)
12. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯಲ್ಲಿ ಘಟಕ ವೆಚ್ಚ ರೂ.1.00 ಲಕ್ಷಗಳ ಮಿತಿಯಲ್ಲಿ ಬ್ಯಾಂಕ್ ಗಳು ಸಾಲ ಮಂಜೂರು ಮಾಡಿದಲ್ಲಿ ಶೇ,30ರಷ್ಟು ಗರಿಷ್ಟ ರೂ.10,000/-ಗಳ ಸಹಾಯಧನ ಮಂಜೂರು ಮಾಡಬೇಕು. ಘಟಕ ರೂ.1.00ಲಕ್ಷ ಗಳಿಗೆ ಮೇಲ್ಪಟ್ಟಲ್ಲಿ ಶೇ.20ರಷ್ಟು ಮಾರ್ಜಿನ್ ಹಣ ಮಂಜೂರು ಮಾಡುವುದು. ಯಾವುದೇ ಕಾರಣಕ್ಕೂ ಬ್ಯಾಂಕ್ ಮಂಜೂರು ಮಾಡಿದ ಘಟಕ ವೆಚ್ಚವನ್ನು ಕಡಿಮೆ ಮಾಡಿ ಸಹಾಧನ ಲಭ್ಯವಾಗುವಂತೆ ಪ್ರಸ್ತಾವನೆ ಸಲ್ಲಿಸಬಾರದು. ಪ್ರಸ್ತಾವನೆಯೊಂದಿಗೆ ಬ್ಯಾಂಕ್ ಮಂಜೂರಾತಿ ಪತ್ರ/ಮಾರ್ಜಿನ್ ಹಣ ಕ್ಲೈಂ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
13. ಸರ್ಕಾರ ಆದೇಶ ಸಂಖ್ಯೆ: ಹಿಂವಕ/31/ಸಮನ್ವಯ/2013, ಬೆಂಗಳೂರು ದಿನಾಂಕ 25/02/2013ರನ್ವಯ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

## 2) ಚೈತನ್ಯ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ

1. **ಫಲಾನುಭವಿಗಳು:-** ಬ್ಯಾಂಕ್ ಗಳಿಂದ ಸಾಲ ಪಡೆಯಲು ಸಾಧ್ಯವಿಲ್ಲದ ಹಿಂದುಳಿದ ಮತ್ತು ಅತಿ ಹಿಂದುಳಿದ ವರ್ಗದವರು, ಸಾಂಪ್ರದಾಯಿಕ ವೃತ್ತಿಯಲ್ಲದ ಚಟುವಟಿಕೆಗಳನ್ನು ಕೈಗೊಳ್ಳುವಂತಹವರು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಭೂರಹಿತ ಕೃಷಿಕೂಲಿಕಾರ್ಮಿಕರು ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಮಂಜೂರು ಮಾಡಲಾಗುವುದು.
2. **ಅರ್ಹತೆ:-** ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು(ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.
3. **ಸಹಾಯಧನ** ಶೇ.30ರಷ್ಟು ಗರಿಷ್ಠ ರೂ.10,000/-ಗಳು.
4. **ಸಾಲದ ಮೊತ್ತ:** ರೂ.40,000/-ಗಳ ಸಾಲ ವಾರ್ಷಿಕ ಶೇ.4ರ ಬಡ್ಡಿದರ.
5. **ಸಾಲದ ಮರುಪಾವತಿ ಅವಧಿ;** 3 ವರ್ಷಗಳು ಮಾಸಿಕ ಕಂತುಗಳಲ್ಲಿ.
6. ಈ ಯೋಜನೆಯಲ್ಲಿ ಕೃಷಿ ಅವಲಂಭಿತ ಚಟುವಟಿಕೆಗಳು, ವ್ಯಾಪಾರ ಚಟುವಟಿಕೆಗಳು ಹಾಗೂ ಸೇವಾ ವಲಯ ಚಟುವಟಿಕೆಗಳಿಗೆ ಸಮನಾಗಿ ಹಂಚಿಕೆ ಮಾಡಿಕೊಂಡು ಅನುಷ್ಠಾನಗೊಳಿಸುವುದು.

## 3) ಕಿರುಸಾಲ ಯೋಜನೆ:-

ಈ ಯೋಜನೆಯಲ್ಲಿ ಕುಶಲಿ ಕುಶಲಿಯಲ್ಲದ ವ್ಯಕ್ತಿಗಳು ನಗರ, ಪಟ್ಟಣ ಮತ್ತು ಹೋಬಳಿ ಹಂತಗಳಲ್ಲಿ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಸೌಲಭ್ಯ ನೀಡುವುದು.

1. **ಸಾಲದ ಉದ್ದೇಶ:-** ಸಣ್ಣ ವ್ಯಾಪಾರ ಚುಟುವಟಿಕೆಗಳಾದ ಹಣ್ಣು, ತರಕಾರಿ ವ್ಯಾಪಾರ, ಹಾಲು ವ್ಯಾಪಾರ, ಹೂ ವ್ಯಾಪಾರ, ಮೀನುವ್ಯಾಪಾರ, ಟೀ/ಕಾಫೀ ಸ್ಟಾಲ್, ವ್ಯಾಪಾರ, ಸಣ್ಣ ವ್ಯಾಪಾರ ಇತ್ಯಾದಿ ವ್ಯಾಪಾರದ ಚಟುವಟಿಕೆಗಳಿಗೆ ಗರಿಷ್ಟ ರೂ.15,000/-ಗಳ ಆರ್ಥಿಕ ನೆರವು.
2. **ಅರ್ಹತೆ:** ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು(ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ)
3. **ಸಹಾಯಧನ:** ಗರಿಷ್ಠ ರೂ.5,000/-ಗಳು
4. **ಸಾಲದ ಮೊತ್ತ:** ರೂ.10,000/-ಗಳು
5. **ಬಡ್ಡಿದರ:** ಸ್ವ ಸಹಾಯ ಸಂಘಗಳು ಸಾಲದ ಮೊತ್ತವನ್ನು ವಾರ್ಷಿಕ ಶೇಕಡ 4ರ ಬಡ್ಡಿಯೊಂದಿಗೆ ನಿಗಮಕ್ಕೆ ಹಿಂದಿರುಗಿಸಬೇಕಾಗಿರುತ್ತದೆ. ಶೇಕಡ 1ರ ಭಾಗ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆದು ಸ್ವ ಸಹಾಯ ಗುಂಪುಗಳು ಸೇವಾ ಶುಲ್ಕವಾಗಿ ಇಟ್ಟುಕೊಳ್ಳಬಹುದು.
6. ಫಲಾನುಭವಿಗಳು ಸಹಾಯ ಗುಂಪುಗಳ ಸದಸ್ಯರಾಗಿರಬೇಕು.
7. ಫಲಾನುಭವಿಗಳು ಬಿ.ಪಿ.ಎಲ್ ಕುಟುಂಬಕ್ಕೆ ಸೇರಿರಬೇಕು. ಹಾಗೂ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರಬಾರದು.
8. **ಮರುಪಾವತಿ:** ಸ್ವಸಹಾಯ ಗುಂಪುಗಳು ಸಾಲದ ಮೊತ್ತವನ್ನು 36 ತಿಂಗಳಲ್ಲಿ ತ್ರೈಮಾಸಿಕ ಕಂತುಗಳಲ್ಲಿ ಪ್ರತಿ ವರ್ಷ 30ನೇ ಜೂನ್, 30ನೇ ಸೆಪ್ಟಂಬರ್, 30ನೇ ಡಿಸೆಂಬರ್ ಹಾಗೂ 31ನೇ ಮಾರ್ಚ್ ನಲ್ಲಿ ಸಾಲ ಮರುಪಾವತಿ ಮಾಡಬೇಕು. ಸುಸ್ತಿಯಾದಲ್ಲಿ ಶೇಕಡ 5ರಷ್ಟು ದಂಡ ಬಡ್ಡಿ ಪಾವತಿಸಬೇಕು.

## 4) ಅರಿವು-ಶೈಕ್ಷಣಿಕ ಸಾಲ ಯೋಜನೆ(ನವೀಕರಣ)

ಅರಿವು-ಶೈಕ್ಷಣಿಕ ಸಾಲ ಯೋಜನೆಯಡಿಯಲ್ಲಿ ಈಗಾಗಲೇ ಕಳೆದ ಸಾಲುಗಳಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿನಲ್ಲಿ ಮುಂದುವರೆದ ವ್ಯಾಸಂಗದ ಕೋರ್ಸ್ ಗಳಿಗೆ ಕಂತುಗಳನುಸಾರ ಸಾಲ ಮಂಜೂರು ಮಾಡಲಾಗುವುದು.

## 5) ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕುಸುಬುದಾರರಿಗೆ ಸಾಲ ಮತ್ತು ಸಹಾಯಧನ

1. ಸಾಂಪ್ರದಾಯಿಕ ವೃತ್ತಿ ಮತ್ತು ಕುಶಲಕರ್ಮಿಗಳಿಗೆ ಅವರ ವೃತ್ತಿ ಕೌಶಲ್ಯತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ರೂ.5,000/-ಗಳ ಸಹಾಯಧನ ಹಾಗೂ ರೂ.45,000/-ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡುವುದು.
2. ಈ ಕಾರ್ಯಕ್ರಮದಲ್ಲಿ ರೂ.45,000/-ಗಳಿಂತ ಹೆಚ್ಚಿನ ಸಾಲದ ಮೊತ್ತ ಕೋರಿದಲ್ಲಿ ಅಂತಹ ಫಲಾನುಭವಿಗಳಿಗೆ ಬ್ಯಾಂಕ್ ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯಲ್ಲಿ ಸೌಲಭ್ಯ ಒದಗಿಸಬೇಕು

### ಅರ್ಹತೆ:

1. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು.(ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.
2. ಸಾಂಪ್ರದಾಯಿಕ ವೃತ್ತಿಗಳಲ್ಲಿ ಗುರುತಿಸಿರುವ 47 ವೃತ್ತಿಗಳಾದ ಬಡಗಿ ಕೆಲಸ, ಮರದ ಕೆತ್ತನೆ ಕೆಲಸ, ಉಣ್ಣೆ ಮತ್ತು ಕಂಬಳಿ ನೇಯ್ಗೆ, ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ ಕುಂಬಾರಿಕೆ/ಕಲಾತ್ಮಕ ಮಡಿಕೆ ತಯಾರಿಕೆ, ಟೈಲರಿಂಗ್, ಹತ್ತಿ ನೇಯ್ಗೆ/ನೇಕಾರಿಕೆ, ಟಿನ್ ವಸ್ತುಗಳ ತಯಾರಿಕೆ, ಜೇನು ಸಾಕಾಣಿಕೆ, ನಿಟ್ಟಿಂಗ್ ಕೆಲಸ, ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ, ಚರ್ಮದ ವಸ್ತುಗಳ ತಯಾರಿಕೆ, **ಗಾಣದ ಕೆಲಸ**, ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ, ಅಗರಭತ್ತಿ ತಯಾರಿಕೆ, ಮೆಷನರಿ ವರ್ಕ್ಸ್, ಪೊರಕೆ ಕಡ್ಡಿ ತಯಾರಿಕೆ, ಕಾಯರ್ ಫೈಬರ್ ತಯಾರಿಕೆ, ಹೂ ಕಟ್ಟುವ ವೃತ್ತಿ, ಬಿದರಿ ವೇರ್ ಕೆಲಸ, ವಿಗ್ರಹ/ಕಲ್ಲು ಕತ್ತನೆ ಕೆಲಸಗಳು, ಪಾತ್ರಗಳಿಗೆ ಕಲಾಯಿ, ಕ್ಷೌರಿಕ ವೃತ್ತಿ/ಸೆಲೂನ್, ಮೀನುಗಾರಿಕೆ, ವಾದ್ಯ ವೃಂದ ವೃತ್ತಿ, ವಾಲಗ ಊದುವುದು, ನಾಟಿ ಔಷಧಿ, ಗೌಳಿ ವೃತ್ತಿ(ಹೈನುಗಾರಿಕೆ), ದನಗಾಹಿ ವೃತ್ತಿ, ಬಣ್ಣ/ಶೃಂಗಾರ (ಬ್ಯೂಟಿ ಪಾರ್ಲರ್) ಮಾಡುವ ವೃತ್ತಿ, ಬೈಸಿಕಲ್/ಆಟೋಮೊಬೈಲ್ ರಿಪೇರಿ, ಬಳೆ ವ್ಯಾಪಾರ/ಮೇಣದ ಬತ್ತಿ, ಶೀಟ್ ಮೆಟಲ್ ವೃತ್ತಿ, ವೆಲ್ಡಿಂಗ್ ವರ್ಕ್ಸ್, ಚಿನ್ನಬೆಳ್ಳಿ ಕೆಲಸ, ಬಣ್ಣಗಾರಿಕೆ ಮತ್ತು ಮುದ್ರಣಕಾರಿಕೆ, ಕುರಿ ಸಾಕಾಣಿಕೆ, ಕಂಚು ಕೆಲಸ, ಮ್ಯಾಟ್ ತಯಾರಿಕೆ, ನಾರಿನಿಂದ ವಿವಿಧ ಉತ್ಪನ್ನ ತಯಾರಿಕೆ, ಗಾಡಿ/ರಥ ತಯಾರಿಕೆ, ಕಮ್ಮಾರಿಕೆ/ಕುಲುಮೆ, ಗ್ಲಾಸ್ ಬೀಡ್ಸ್ ತಯಾರಿಕೆ, ಬೆತ್ತದ ಕೆಲಸ(ರಟ್ಟನ್) ಆಟಿಕೆ/ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ, ಮೆಟಲ್ ಕ್ರಾಫ್ಟ್ ಕೆಲಸ. ಕಂಬಾರಿಕೆ ಕಲಾತ್ಮಕ ಉತ್ಪನ್ನಗಳ ತಯಾರಿಕೆ, ನಿಟ್ಟಿಂಗ್ ಕೆಲಸ, ಜೇನು ಸಾಕಾಣಿಕೆ, ಟೈಲರಿಂಗ್, ಹತ್ತಿ ನೇಯ್ಗೆ/ನೇಕಾರಿಕೆ ಚರ್ಮದ ವಸ್ತುಗಳ ತಯಾರಿಕೆ.

**ವಿಶೇಷ ಸೂಚನೆ:-**ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿರುವುದರಿಂದ ಈ ಮೇಲ್ಕಂಡ ವೃತ್ತಿಗಳಲ್ಲಿ ವಿಶ್ವಕರ್ಮ ಸಮುದಾಯದವರು ಕೈಗೊಳ್ಳುವ ವೃತ್ತಿಗಳಿಗೆ ಹಾಗೂ ಕುಂಬಾರಿಕೆ ಅಭಿವೃದ್ಧಿ ಮಂಡಳಿಯು ಕಾರ್ಯ ನಿರ್ವಹಿಸುತ್ತಿದ್ದು, ಇದರ ವತಿಯಿಂದ ಕುಂಬಾರಿಕೆ ಉದ್ದೇಶಕ್ಕೆ ಪ್ರತ್ಯೇಕವಾಗಿ ಗುರಿ ನಿಗದಿಪಡಿಸಿರುವುದರಿಂದ ಈ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮುದಾಯದವರಿಗೆ ಮತ್ತು ಕುಂಬಾರ ಸಮುದಾಯದವರಿಗೆ ಅವರು ನಿರ್ವಹಿಸುವ ಸಾಂಪ್ರದಾಯಿಕ ವೃತ್ತಿಗಳಿಗೆ ಸಾಲ ಸೌಲಭ್ಯ ಒದಗಿಸಲು ಅವಕಾಶವಿರುವುದಿಲ್ಲ.

## 6) ಕುಂಬಾರಿಕೆ ಅಭಿವೃದ್ಧಿ ಯೋಜನೆ

### ಕುಂಬಾರಿಕೆ ಉತ್ಪನ್ನಗಳ ತಯಾರಿಕೆಗೆ ಆರ್ಥಿಕ ನೆರವು

1. ಕುಂಬಾರಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು **'ಕುಂಭಕಲಾ ಅಭಿವೃದ್ಧಿ ಮಂಡಳಿಯನ್ನು'** ರಚಿಸಿರುತ್ತದೆ.
2. **ಉದ್ದೇಶ:** ಕುಂಬಾರಿಕೆ ಅಭಿವೃದ್ಧಿಗಾಗಿ ಉತ್ಪನ್ನಗಳ ತಯಾರಿಕೆಗೆ ಅವಶ್ಯವಿರುವ ಆಧುನಿಕ ಉಪಕರಣಗಳನ್ನು ಕೊಳ್ಳಲು ಹಾಗೂ ದುಡಿಮೆ ಬಂಡವಾಳಕ್ಕಾಗಿ ಸಾಲ ಮತ್ತು ಸಹಾಯಧನ ಒದಗಿಸುವುದು.
3. **ಅರ್ಹತೆ:** ಕಂಬಾರ ಸಮೂದಾಯಕ್ಕೆ ಸೇರಿರಬೇಕು. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.
4. **ಸಹಾಯಧನ:** ಗರಿಷ್ಠ ರೂ.5,000/-ಗಳು.
5. ಸಾಲದ ಮೊತ್ತ ಗರಿಷ್ಟ ರೂ.25,000/-ಗಳು ವಾರ್ಷಿಕ ಶೇ.4ರ ಬಡ್ಡಿದರ.
6. ಮರುಪಾವತಿ ಅವಧಿ 3 ವರ್ಷ (ಮಾಸಿಕ ಕಂತುಗಳಲ್ಲಿ)
7. **ಫಲಾನುಭವಿಗಳ ಆಯ್ಕೆ:** ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

## 7) ಕಳ್ಳಭಟ್ಟಿ ಹಾಗೂ ಅಕ್ರಮ ಮಧ್ಯ ತಯಾರಿಕೆಯಲ್ಲಿ ತೊಡಗಿ ಸಂತ್ರಸ್ತರಾದ ಕುಟುಂಬಗಳ ಪುನರ್ವಸತಿಗೆ ಆರ್ಥಿಕ ನೆರವು:-

ಈ ಯೋಜನೆಯಲ್ಲಿ ಕಳಬಟ್ಟಿ ಮತ್ತು ಅಕ್ರಮ ಮಧ್ಯ ತಯಾರಿಕೆ ಕೇಂದ್ರಗಳಲ್ಲಿ ತೊಡಗಿದ್ದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ರೂ.5,000/-ಗಳ ಸಹಾಯಧನ ಹಾಗೂ ರೂ.45,000/-ಗಳ ಸಾಲ ಒಟ್ಟು ರೂ.50,000/-ಗಳ ಸೌಲಭ್ಯ ಒದಗಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 536 ಬಿಎಂಎಸ್ 2013 ಬೆಂಗಳೂರು, ದಿನಾಂಕ 22/01/2014ರಲ್ಲಿ ಕಳ್ಳಭಟ್ಟಿ ಹಾಗೂ ಅಕ್ರಮ ಮಧ್ಯ ತಯಾರಿಕೆಯಲ್ಲಿ ತೊಡಗಿದ್ದು, ಸಂತ್ರಸ್ತರಾದ ಒಟ್ಟು 897 ಕುಟುಂಬಗಳ ಜಿಲ್ಲಾವಾರು ಸಂಖ್ಯೆ ನೀಡಿ ಪುನರ್ ವಸತಿಗೆ ಸಾಲ ಮತ್ತು ಸಹಾಯಧನದ

ಸೌಲಭ್ಯ ತಿಳಿಸಲಾಗಿರುತ್ತದೆ. ಕಳೆದ ಸಾಲಿನಲ್ಲಿ ಈಗಾಗಲೇ 22 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ಸೌಲಭ್ಯ ತಿಳಿಸಲಾಗಿರುತ್ತದೆ.

## 8) ಅರಿವು ಶೈಕ್ಷಣಿಕ ನೇರ ಸಾಲ ಯೋಜನೆ:

1. ಈ ಯೋಜನೆಯಲ್ಲಿ ಅಭ್ಯರ್ಥಿಯು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ)
2. ಕುಟುಂಬದ ವಾರ್ಷಿಕ ಆದಾಯ ರೂ.3.50ಲಕ್ಷಗಳ ಮಿತಿಯಲ್ಲಿರಬೇಕು.
3. ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ(ಸಿ.ಇ.ಟಿ) ಪ್ರವೇಶ ಪಡೆದು **ಬಿ.ಇ(ಸಿ.ಇ.ಟಿ), ಎಂ.ಬಿ.ಬಿ.ಎಸ್, ಬಿ.ಯೂ.ಎಂ.ಎಸ್, ಬಿ.ಡಿ.ಎಸ್, ಬಿ.ಎ.ಎಂ.ಎಸ್, ಬಿ.ಹೆಚ್.ಎಂ.ಎಸ್, ಎಂ.ಬಿ.ಎ, ಎಂ.ಟೆಕ್, ಎಂ.ಇ, ಎಂ.ಡಿ. ಪಿ.ಹೆಚ್.ಡಿ, ಬಿ.ಸಿ.ಎ/ಎಂ.ಸಿ.ಎ, ಎಂ.ಎಸ್.ಅಗ್ರಿಕಲ್ಚರ್, ಬಿ.ಎಸ್.ಸಿ ನರ್ಸಿಂಗ್, ಬಿ.ಫಾರಂ/ಎಂ.ಫಾರಂ, ಬಿ.ಎಸ್.ಸಿ ಪ್ಯಾರಾ ಮೆಡಿಕಲ್, ಬಿ.ಎಸ್.ಸಿ ಬಯೋ ಟಿಕ್ನಾಲಜಿ, ಬಿ.ಟೆಕ್, ಬಿ.ಪಿ.ಟಿ, ಬಿ.ವಿಎಸ್.ಸಿ/ಎಂ.ವಿ.ಎಸ್.ಸಿ, ಬಿ.ಎನ್.ಎಂ,** ಬಿ.ಹೆಚ್.ಎಂ, ಎಂ.ಡಿ.ಎಸ್, ಎಂ.ಎಸ್.ಡಬ್ಲ್ಯೂ, ಎಲ್.ಎಲ್.ಎಂ, **ಎಂ.ಎಫ್.ಎ, ಎಂ.ಎಸ್.ಸಿ. ಬಯೋ ಟಿಕ್ನಾಲಜಿ ಮತ್ತು ಎಂ.ಎಸ್.ಸಿ(ಎ.ಜಿ) ಕೋರ್ಸ್ ಗಳಲ್ಲಿ** ಉಚಿತ ಸೀಟ್ ಪಡೆದು ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಕೋರ್ಸ್ ನ ಅವಧಿಗೆ ಶೇಕಡ 2ರ ಬಡ್ಡಿ ದರದಲ್ಲಿ ಗರಿಷ್ಠ ವಾರ್ಷಿಕ ರೂ.1.00 ಲಕ್ಷಗಳ ವರಗೆ ಸಾಲ ಒದಗಿಸಲಾಗುವುದು.
4. **ಮರುಪಾವತಿ:** ವಿದ್ಯಾರ್ಥಿಯು ಕೋರ್ಸ್ ಪೂರ್ಣಗೊಂಡ 4ನೇ ತಿಂಗಳಿಂದ ಮರುಪಾವತಿಯ ಕಂತುಗಳು ತಾನಾಯೇ ಪ್ರಾರಂಭವಾಗುತ್ತವೆ. ಮರುಪಾವತಿಯ ಅವಧಿ 3 ವರ್ಷಗಳು.
5. **ಫಲಾನುಭವಿಗಳ ಆಯ್ಕೆ:** ಈ ಕಾರ್ಯಕ್ರಮದಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಜಿಲ್ಲೆಗೆ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

## 9) ಕುರಿ ಸಾಕಾಣಿಕೆ ಮಾಡುವ ಕುರುಬ ಸಮಾಜದವರಿಗೆ ಕುರಿಗಳನ್ನು ಸಾಕಾಲು ಹಾಗೂ ಕಂಬಳಿ ನೇಕಾರರಿಗೆ ಸಾಲ ಮತ್ತು ಸಹಾಯಧನ ಯೋಜನೆ:

ಸನ್ಮಾನ್ಯ ಮುಖ್ಯಮಂತ್ರಿಯವರು 2013-14ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-288ರಲ್ಲಿ ಕುರಿ ಸಾಕಾಣಿಕೆ ಮಾಡುವ ಪ್ರವರ್ಗ-1, 2ಎ, (ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಸಮಾಜದವರಿಗೆ ಕುರಿಗಳ ಸಾಕಲು ಹಾಗೂ ಕಂಬಳಿ ನೇಕಾರಿಕೆಗೆ ಆರ್ಥಿಕ ನೆರವು ನೀಡಲು ರೂ.10,000/-ಗಳ ಸಹಾಯಧನ ಹಾಗೂ ರೂ.90,000/-ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ. ಈ ಘೋಷಣೆಯಂತೆ ಸರ್ಕಾರದ ಆದೇಶ ಸಂಖ್ಯೆ ಬಿಸಿಡಬ್ಲ್ಯೂ 503 ಬಿಎಂಎಸ್ 2013, ಬೆಂಗಳೂರು ದಿನಾಂಕ 29/03/2014ರಲ್ಲಿ ಕುರಿ ಸಾಕಾಣಿಕೆ ಹಾಗೂ ಉಣ್ಣೆ ನೇಕಾರಿಕೆ ಮಾಡುವ ಕುರುಬ ಸಮಾಜದ ಪ್ರತಿ ಅರ್ಜಿದಾರರಿಗೆ ರೂ.10000- ಸಹಾಯಧನ ಹಾಗೂ ರೂ.90000/-ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲು ಸರ್ಕಾರವು ಆದೇಶ ಹೊರಡಿಸಿರುತ್ತದೆ ಹಾಗೂ ಪೂರಕ

ಅಂದಾಜು-2ರಲ್ಲಿ ರೂ.960.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. 2014-15ನೇ ಸಾಲಿನಲ್ಲಿ 960 ಜನರಿಗೆ ಸೌಲಭ್ಯ ಒದಗಿಸುವ ಗುರಿ ಹೊಂದಲಾಗಿದೆ.

## 10) ಗಂಗಾಕಲ್ಯಾಣ ನೀರಾವರಿ ಯೋಜನೆ:

**ಉದ್ದೇಶ:** ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು(ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40000/-ಗಳ ಒಳಗಿರಬೇಕು.

1. **ವೈಯಕ್ತಿಯ ನೀರಾವರಿ ಕೊಳವೆಬಾವಿ ಯೋಜನೆ:-** ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು. ಸಣ್ಣ ಮತ್ತು ಅತಿಸಣ್ಣ ರೈತರಾಗಿಬೇಕು.

   **ಘಟಕ ವೆಚ್ಚ:-** ರೂ.2.00 ಲಕ್ಷಗಳು, ರೂ.1.50 ಲಕ್ಷಗಳ ಸಹಾಯಧನ(ಸಬ್ಸಿಡಿ) ಹಾಗೂ ಸಾಲದ ಮೊತ್ತ ರೂ.50,000/-ಗಳ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ, ಸಾಲದ ಮರುಪಾವತಿ ಅವಧಿ 3 ವರ್ಷಗಳು.

2. **ಸಾಮೂಹಿಕ ನೀರಾವರಿ ಕೊಳವೆಬಾವಿ ಯೋಜನೆ:** ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಕನಿಷ್ಠ 3 ಜನ ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ 8 ಎಕರೆ ಮತ್ತು ಅದಕ್ಕಿಂತ ಹೆಚ್ಚಿನ ಜಮೀನಿಗೆ ಸಾಮೂಹಿಕವಾಗಿ ನೀರಾವರಿ ಸೌಲಭ್ಯ.

   **ಘಟಕ ವೆಚ್ಚ:** ರೂ.2.53 ಲಕ್ಷಗಳ ವೆಚ್ಚದಲ್ಲಿ 8-15 ಎಕರೆ ಜಮೀನಿಗೆ 2 ಕೊಳವೆಬಾವಿ ಹಾಗೂ 15 ಎಕರೆಗಿಂತ ಹೆಚ್ಚು ಜಮೀನು ಒಳಪಡುವ ಘಟಕಗಳಿಗೆ ನಿಗಧಿತ ಘಟಕ ವೆಚ್ಚ ರೂ.3.59 ಲಕ್ಷಗಳಿಂದ 3 ಕೊಳವೆ ಬಾವಿಗಳನ್ನು ಕೊರೆಯಿಸಿ ಪಂಪ್ ಸೆಟ್ ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು ಹಾಗೂ ವಿದ್ಯುದ್ಧೀಕರಣಕ್ಕೆ ಠೇವಣಿ ಪಾವತಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಇದು ಪೂರ್ಣ ಅನುದಾನವಾಗಿರುತ್ತದೆ.

3. **ತೆರೆದ ಬಾವಿ:** ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗೆ ನಿಗದಿಪಡಿಸಿದಂತೆ ರೂ.1.50 ಲಕ್ಷಗಳ ಅನುದಾನ ಹಾಗೂ ರೂ.50,000/-ಗಳ ಸಾಲ ಹೀಗೆ ಒಟ್ಟು ರೂ.2.00 ಲಕ್ಷಗಳ ವೆಚ್ಚದಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದಬಾವಿ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

4. **ಸಾಮೂಹಿಕ ಏತ ನೀರಾವರಿ ಯೋಜನೆ:-** ಭೂಮಟ್ಟದಲ್ಲಿ ಶಾಶ್ವತವಾಗಿ ದೊರೆಯುವ ಜಲಸಂಪನ್ಮೂಲಗಳಾದ ನದಿ, ಕೆರೆ, ಹಳ್ಳ, ಇವುಗಳಿಗೆ ಮೋಟಾರ್ ಅಳವಡಿಸಿ ಪೈಪ್ ಲೈನ್ ಮೂಲಕ ಖುಷ್ಕಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.

   **ಘಟಕ ವೆಚ್ಚ:** ಸಾಮೂಹಿಕ ನೀರಾವರಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಸೌಲಭ್ಯ ಒದಗಿಸುವುದು.

ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಅನುದಾನದಲ್ಲಿ ಮೀಸಲಾತಿ ಅನುಪಾತ ಪ್ರವರ್ಗ-1 ಮತ್ತು 2ಎಗೆ 70% ಪ್ರವರ್ಗ-3ಎ ಮತ್ತು 3ಬಿಗೆ 30% ರಂತೆ ಸೌಲಭ್ಯ ಒದಗಿಸಬೇಕು.

5. ಕರ್ನಾಟಕ ಅಂತರ್ಜಲ ಅಧಿನಿಯಮದನ್ವಯ ಈ ಕೆಳಕಂಡ 35 ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯುವ ಮುನ್ನ ಅಂತರ್ಜಲ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು, ಅನುಮತಿ ಪಡೆದಂತಹ ಫಲಾನುಭವಿಗಳ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆಯಲು ಕ್ರಮವಹಿಸತಕ್ಕದ್ದು.

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ತಾಲ್ಲೂಕುಗಳ ಹೆಸರು |
|---|---|---|---|
| 1 | ಬೆಂಗಳೂರು ನಗರ | 1 | ಆನೇಕಲ್ |
| | | 2 | ಬೆಂಗಳೂರು ಪೂರ್ವ |
| | | 3 | ಬೆಂಗಳೂರು ಉತ್ತರ |
| | | 4 | ಬೆಂಗಳೂರು ದಕ್ಷಿಣ |
| 2 | ಬೆಂಗಳೂರು ಗ್ರಾಮಾಂತರ | 5 | ದೇವನಹಳ್ಳಿ |
| | | 6 | ದೊಡ್ಡಬಳ್ಳಾಪುರ |
| | | 7 | ಹೊಸಕೋಟೆ |
| | | 8 | ನೆಲಮಂಗಲ |
| 3 | ರಾಮನಗರ | 9 | ಕನಕಪುರ |
| | | 10 | ರಾಮನಗರ |
| 4 | ತುಮಕೂರು | 11 | ಚಿಕ್ಕನಾಯಕನಹಳ್ಳಿ |
| | | 12 | ಕೊರಟಗೆರೆ |
| | | 13 | ಮಧುಗಿರಿ |
| 5 | ಚಿತ್ರದುರ್ಗ | 14 | ಚಿತ್ರದುರ್ಗ |
| | | 15 | ಹೊಳಲ್ಕೆರೆ |
| 6 | ಕೋಲಾರ | 16 | ಬಂಗಾರಪೇಟೆ |
| | | 17 | ಕೋಲಾರ |
| | | 18 | ಮಾಲೂರು |
| | | 19 | ಮುಳಬಾಗಿಲು |
| | | 20 | ಶ್ರೀನಿವಾಸಪುರ |

| | | | |
|---|---|---|---|
| 7 | ಚಿಕ್ಕಬಳ್ಳಾಪುರ | 21 | ಚಿಕ್ಕಬಳ್ಳಾಪುರ |
| | | 22 | ಚಿಂತಾಮಣಿ |
| | | 23 | ಗೌರಿಬಿದನೂರು |
| | | 24 | ಗುಡಿಬಂಡೆ |
| | | 25 | ಶಿಡ್ಲಘಟ್ಟ |
| 8 | ದಾವಣಗೆರೆ | 26 | ಜಗಳೂರು |
| 9 | ಬೆಳಗಾವಿ | 27 | ಅಥಣಿ |
| | | 28 | ಬೈಲಹೊಂಗಲ |
| | | 29 | ರಾಮದುರ್ಗ |
| | | 30 | ಸವದತ್ತಿ |
| 10 | ಬಾಗಲಕೋಟೆ | 31 | ಬಾದಾಮಿ |
| | | 32 | ಬಾಗಲಕೋಟೆ |
| 11 | ಬಳ್ಳಾರಿ | 33 | ಹಗರಿ ಬೊಮ್ಮನಹಳ್ಳಿ |
| | | 34 | ಹಡಗಲಿ |
| 12 | ಕೊಪ್ಪಳ | 35 | ಯಲಬುರ್ಗ |

## 11) ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುವ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಬಡ್ಡಿರಹಿತ ಸಾಲ ಯೋಜನೆ.

1. **ಉದ್ದೇಶ:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ, ಪೋಸ್ಟ್ ಡಾಕ್ಟರಲ್ ಮತ್ತು ಮಾಸ್ಟರ್ ಡಿಗ್ರಿ ವ್ಯಾಸಂಗಕ್ಕೆ ಪ್ರವೇಶ ಹೊಂದಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ.
2. **ಸಾಲದ ಮೊತ್ತ:** ವಾರ್ಷಿಕ ಗರಿಷ್ಠ ರೂ.3.50ಲಕ್ಷಗಳಂತೆ 3 ವರ್ಷದ ಅವಧಿಗೆ ಗರಿಷ್ಠ ರೂ.10.00ಲಕ್ಷಗಳು.
3. ಅಭ್ಯರ್ಥಿಯ ವಯಸ್ಸು 35 ವರ್ಗಗಳ ವಯೋಮಿತಿಯಲ್ಲಿರಬೇಕು.
4. **ಕುಟುಂಬದ ವಾರ್ಷಿಕ ಆದಾಯ ರೂ.1,44,000/- ಗಳ ಮಿತಿಯಲ್ಲಿರಬೇಕು .**
5. ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ ಪತ್ರ, ವೀಸಾ, ಪಾಸ್ ಪೋರ್ಟ್, ಏರ್ ಟಿಕೇಟ್ ಪ್ರತಿ ಒದಗಿಸಬೇಕು.
6. ಸಾಲದ ಭದ್ರತೆಗೆ ವಿದ್ಯಾರ್ಥಿಯ ತಂದೆ ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ಥಿಯನ್ನು ನಿಗಮಕ್ಕೆ ಆಧಾರ ಮಾಡಬೇಕು. (ಕೊಲ್ಯಾಟರಲ್ ಸೆಕ್ಯೂರಿಟಿ)
7. **ಅಭ್ಯರ್ಥಿಗಳ ಆಯ್ಕೆ;** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡುವುದು.
8. **ಮರುಪಾವತಿ ಅವಧಿ:** ಮರುಪಾವತಿ ಅವಧಿ ಗರಿಷ್ಠ 60 ಮಾಸಿಕ ಕಂತುಗಳು, ವ್ಯಾಸಂಗ ಪೂರ್ಣಗೊಂಡ 1 ವರ್ಷದ ನಂತರ ಅಥವಾ ಉದ್ಯೋಗ ದೊರೆತ 6 ತಿಂಗಳ ನಂತರ ಮರುಪಾವತಿ ಕಂತು ಪ್ರಾರಂಭವಾಗುತ್ತದೆ.

## 12) ಸವಿತಾ ಸಮಾಜದ ಅಭಿವೃದ್ಧಿ ಯೋಜನೆ:-

ಸವಿತ ಸಮಾಜದವರಿಗೆ ಬೈಸಿಕಲ್ ಮತ್ತು ಉಚಿತ ಟೂಲ್ ಕಿಟ್ ವಿತರಣೆಗೆ ಕಳೆದ ಸಾಲುಗಳಲ್ಲಿ ನಿಗದಿಪಡಿಸಿದ ಮೊತ್ತದಲ್ಲಿ ಉಳಿದಿರುವ ಮೊತ್ತ ರೂ.75.00 ಲಕ್ಷಗಳನ್ನು ಈ ಸಮಾಜದವರಿಗೆ ಸಾಲ ಮತ್ತು ಸಹಾಯಧನ ಒದಗಿಸಲು ದಿನಾಂಕ 25/05/2014ರಂದು ನಡೆದ ನಿಗಮದ 158ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಬೈಸಿಕಲ್ ಮತ್ತು ಉಚಿತ ಟೂಲ್ ಕಿಟ್ ವಿತರಣೆಗೆ ಆಯ್ಕೆ ಮಾಡಿರುವ ಫಲಾನುಭವಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 486 ಬಿಎಂಎಸ್ 2012, ಬೆಂಗಳೂರು ದಿನಾಂಕ 07/01/2013ರನ್ವಯ ಪ್ರತಿ ಫಲಾನುಭವಿಗೆ ರೂ.5,000/-ಗಳ ಸಹಾಯಧನ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ರೂ.30,000/-ಗಳ ಸಾಲವನ್ನು ಮಂಜೂರು ಮಾಡಲಾಗುವುದು. ಉಳಿದಂತಹ ಅರ್ಜಿದಾರರಿಗೆ ಸಾಂಪ್ರದಾಯಿಕ ವೃತ್ತಿದಾರರ ಅಭಿವೃದ್ಧಿ ಯೋಜನೆಯಲ್ಲಿ ಸೌಲಭ್ಯ ಒದಗಿಸುವುದು.

# II. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು:

## ರಾಷ್ಟ್ರೀಯ ಹಿಂದುಳಿದ ವರ್ಗಗಳ ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು:

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು ದಿನಾಂಕ 25/02/2013ರನ್ವಯ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಬೇಕು.

### 1. ಅವಧಿ ಸಾಲ ಯೋಜನೆ:

ಬಡತನ ರೇಖೆಗಿಂತ ದುಪ್ಪಟ್ಟು ಆದಾಯ ಹೊಂದಿರುವ ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವನ್ನು ಒದಗಿಸಲಾಗುವುದು. ಈ ಯೋಜನೆಯಲ್ಲಿ ಕೃಷಿ ಅವಲಂಬಿತ ಚಟುವಟಿಕೆಗಳು, ಸೇವಾ ವಲಯ, ಸಾರಿಗೆ ವಲಯ, ಗುಡಿ ಕೈಗಾರಿಕೆ, ಸಣ್ಣ ವ್ಯಾಪಾರ ಮುಂತಾದ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸಲಾಗುವುದು.

- ಗರಿಷ್ಠ ಸಾಲದ ಮೊತ್ತ : ರೂ.10.00 ಲಕ್ಷಗಳು (ಪ್ರತಿ ಫಲಾನುಭವಿಗೆ)
- ಬಡ್ಡಿ ದರ : ವಾರ್ಷಿಕ ಶೇ.6 ರಿಂದ 8ರಷ್ಟು
- ಮರುಪಾವತಿ ಅವಧಿ : 36 ರಿಂದ 60 ತಿಂಗಳು
- ವಯೋಮಿತಿ : 18 ರಿಂದ 55 ವರ್ಷಗಳು
- ವಾರ್ಷಿಕ ಆದಾಯದ ಮಿತಿ : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81000/- ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/- ಗಳಿಗಿಂತ ಕಡಿಮೆ ಇರಬೇಕು.

## 2. ನ್ಯೂಸ್ವರ್ಣಿಮಾ ಯೋಜನೆ;

ಮಹಿಳೆಯರ ಸಬಲೀಕರಣಕ್ಕೆ ಹಾಗೂ ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಮಹಿಳೆಯ ಸ್ವಯಂ ಉದ್ಯೋಗ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಈ ಯೋಜನೆಯಲ್ಲಿ ವೈಯಕ್ತಿಕವಾಗಿ ಆರ್ಥಿಕ ನೆರವು ಒದಗಿಸಲಾಗುವುದು.

- ಗರಿಷ್ಠ ಸಾಲದ ಮೊತ್ತ : ರೂ.50,000(ಪ್ರತಿ ಫಲಾನುಭವಿಗೆ)
- ಬಡ್ಡಿ ದರ : ವಾರ್ಷಿಕ ಶೇ.5ರಷ್ಟು
- ಮರುಪಾವತಿ ಅವಧಿ : 48 ತಿಂಗಳು (16 ತ್ರೈಮಾಸಿಕ)
- ವಯೋಮಿತಿ : 18 ರಿಂದ 55 ವರ್ಷಗಳು
- ವಾರ್ಷಿಕ ಆದಾಯದ ಮಿತಿ : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳಿಗಿಂತ ಕಡಿಮೆ ಇರಬೇಕು.

## 3. ಶೈಕ್ಷಣಿಕ ಸಾಲ ಯೋಜನೆ;

ಇಂಜಿನಿಯರಿಂಗ್, ವೈದ್ಯಕೀಯ, ಡೆಂಟಲ್, ಕಂಪ್ಯೂಟರ್, ಚಾರ್ಟ್ ಡ್ ಅಕೌಂಟೆಂಟ್, ಎಂ.ಬಿ.ಎ ಮುಂತಾದ ಎ.ಐ.ಸಿ.ಟಿ.ಇ ಯಿಂದ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಮತ್ತು ಯು.ಜಿ.ಸಿ.ಯಿಂದ ಅನುಮೋದಿತ ಕೋರ್ಸ್ ಗಳಲ್ಲಿ ಪದವಿ ಮತ್ತು ಸ್ನಾತಕೋತ್ತರಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಒದಗಿಸಲಾಗುವುದು. ಈ ಸಾಲದ ಮರುಪಾವತಿಯು ಕೋರ್ಸ್ ಪೂರ್ಣಗೊಂಡು 6 ತಿಂಗಳ ನಂತರ ಮರಪಾವತಿ ಪ್ರಾರಂಭವಾಗುತ್ತದೆ. ಮರುಪಾವತಿ ಅವಧಿ 5 ರಿಂದ 10 ವರ್ಷಗಳ ಮಾಸಿಕ ಕಂತುಗಳಲ್ಲಿ.

- **ಗರಿಷ್ಠ ಸಾಲದ ಮೊತ್ತ** : ವರ್ಷಕ್ಕೆ ರೂ.2.50 ಲಕ್ಷಗಳು. (ಒಟ್ಟು ರೂ.10.00 ಲಕ್ಷಗಳು ಪೂರ್ಣ ಕೋರ್ಸ್ ಗೆ)
- **ಬಡ್ಡಿ ದರ** : ವಾರ್ಷಿಕ ಶೇ.4ರಷ್ಟು
- **ಮರುಪಾವತಿ ಅವಧಿ** : 60 ತಿಂಗಳು (ರೂ.3.00 ಲಕ್ಷಗಳಿಂದ ರಿಂದ ರೂ.5.00 ಲಕ್ಷ ಗಳಿಗೆ 34 ಮಾಸಿಕ ರೂ.5.00 ಲಕ್ಷಗಳಿಗೆ 34 ಮಾಸಿಕ ರೂ.5.00 ರಿಂದ ರೂ.10.00 ಲಕ್ಷಗಳಿಗೆ 120 ತಿಂಗಳು)
- **ವಯೋಮಿತಿ** : 18 ರಿಂದ 32 ವರ್ಗಗಳು.
- **ವಾರ್ಷಿಕ ಆದಾಯದ ಮಿತಿ** : ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳಿಗಿಂತ ಕಡಿಮೆ ಇರಬೇಕು.

## 4. ಸ್ವಯಂ ಸಕ್ಷಮ ಸಾಲ ಯೋಜನೆ:

ವೃತ್ತಿ ಶಿಕ್ಷಣ ಪಡೆದ ಹಿಂದುಳಿದ ವರ್ಗಗಳ ವಿದ್ಯಾವಂತ ಅಭ್ಯರ್ಥಿಗಳು ವಕೀಲರು, ವೈದ್ಯರು, ಇಂಜಿನಿಯರುಗಳು, ಚಾರ್ಟೆಡ್ ಅಕೌಂಟೆಂಟ್ ಗಳು, ನರ್ಸಿಂಗ್ ಹೋಮ್, ಬಯೋ ಮೆಡಿಕಲ್ ಲ್ಯಾಬ್ಸ್, ಫಿಜಿಯೋಥೆರಫಿ ಲ್ಯಾಬ್ ಇತ್ಯಾದಿ ವೃತ್ತಿ ಘಟಕ ಸ್ಥಾಪಿಸಲು ಆರ್ಥಿಕ ನೆರವು ಒದಗಿಸಲಾಗುವುದು.

- ಗರಿಷ್ಠ ಸಾಲದ ಮೊತ್ತ :ರೂ.10.00 ಲಕ್ಷಗಳು.
- ಬಡ್ಡಿದರ :ರೂ.5.00ಲಕ್ಷಗಳವರೆಗೆ ವಾರ್ಷಿಕ ಶೇ.5ರಷ್ಟು ರೂ.5.00 ಲಕ್ಷಕ್ಕಿಂತ ಹೆಚ್ಚಿನ ಘಟಕಗಳಿಗೆ ಸಾಲಕ್ಕೆ ವಾರ್ಷಿಕ ಶೇ.8ರಷ್ಟು
- ಮರುಪಾವತಿ ಅವಧಿ :60 ತಿಂಗಳು.
- ವಯೋಮಿತ :18 ರಿಂದ 35 ವರ್ಷಗಳು.
- ವಾರ್ಷಿಕ ಆದಾಯದ ಮಿತಿ :ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳಿಂತ ಕಡಿಮೆ ಇರಬೇಕು.

## 5. ಮೈಕ್ರೋ ಫೈನಾನ್ಸ್ ಯೋಜನೆ:

ಈ ಯೋಜನೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಹಿಂದುಳಿದ ವರ್ಗಗಳ ಜನರಿಗೆ ಸಣ್ಣ ಸಣ್ಣ ಆರ್ಥಿಕ ಚಟುವಟಿಕೆಗಳಿಗೆ ಸಾಲವನ್ನು ಮಂಜೂರು ಮಾಡಲಾಗುವುದು. ಈ ಸಾಲವನ್ನು ವೈಯಕ್ತಿಕವಾಗಿ ಅಥವಾ ಕನಿಷ್ಠ 10 ಮಂದಿ ಸದಸ್ಯರನ್ನು ಹೊಂದಿರುವ ಸ್ವಸಹಾಯ ಗುಂಪುಗಳ ಮುಖಾಂತರ ಮಂಜೂರು ಮಾಡಲಾಗುವುದು. ಒಂದು ಸ್ವ ಸಹಾಯ ಗುಂಪಿನಲ್ಲಿ 20 ಸದಸ್ಯರಿಗಿಂತ ಹೆಚ್ಚಾಗಿರಬಾರದು.

### ಸಾಲದ ವಿವರ;

1. ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :ಶೇ.90ರಷ್ಟು
2. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :ಶೇ.5ರಷ್ಟು
3. ಫಲಾನುಭವಿ ವಂತಿಕೆ :ಶೇ 5ರಷ್ಟು
4. ಗರಿಷ್ಠ ಸಾಲದ ಮೊತ್ತ ಪ್ರತಿ ಫಲಾನುಭವಿಗೆ :ರೂ.50,000/-
5. ಬಡ್ಡಿ ದರ :ವಾರ್ಷಿಕ ಶೇ.5
6. ಮರುಪಾವತಿ ಅವಧಿ :48 ಮಾಸಿಕ ಕಂತುಗಳು

## 6. **ಮಹಿಳಾ ಸಮೃದ್ಧಿ ಯೋಜನೆ:**

ಮಹಿಳೆಯರನ್ನು ಸಬಲೀಕರಣಗೊಳಿಸಲು ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ, ಅಂದರೆ ಅಗರಬತ್ತಿ ತಯಾರಿಕೆಗೆ, ರೆಡಿಮೇಡ್ ಗಾರ್ಮೆಂಟ್ಸ್, ಡೈರಿ, ವ್ಯಾಪಾರ ಇತ್ಯಾದಿ ಎಲ್ಲಾ ವ್ಯಾಪಾರ ಚಟುವಟಿಕೆಗಳಿಗೆ ಸಾಲ ಮಂಜೂರು ಮಾಡಲಾಗುವುದು. ಪ್ರತಿ ಫಲಾನುಭವಿಗೆ ಗರಿಷ್ಠ ರೂ.35,000/-ಗಳಂತೆ ಒಂದು ಸ್ವ ಸಹಾಯ ಗುಂಪಿಗೆ ಗರಿಷ್ಠ ರೂ.3.50 ಲಕ್ಷ ಗಳವರೆಗೆ ಶೇ.4ರ ಬಡ್ಡಿ ದರದಲ್ಲಿ ಆರ್ಥಿಕ ನೆರವು ಒದಗಿಸುವುದು. ಅರ್ಜಿದಾರರು ಹಿಂದುಳಿದ ವರ್ಗಗಳಿಗೆ ಸೇರಿದ್ದು, ಅವರ ವಾರ್ಷಿಕ ವರಮಾನವು ಗ್ರಾಮಾಂತರ ಪ್ರದೇಶದವರಿಗೆ ರೂ.81,000/-ಗಳು ಮತ್ತು ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳ ಮಿತಿಯಲ್ಲಿರಬೇಕು.

## 7. **ಕೃಷಿ ಸಂಪದ:**

ಹಿಂದುಳಿದ ವರ್ಗಗಳ ಸಣ್ಣ ರೈತರಿಗೆ ತರಕಾರಿ ಬೆಳೆಯಲು ಅಥವಾ ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸಣ್ಣ ಪ್ರಮಾಣದ ಬೆಳೆ ಸಾಲವನ್ನು ಮಂಜೂರು ಮಾಡಲಾಗುವುದು.

- **ಗರಿಷ್ಠ ಸಾಲದ ಮೊತ್ತ:-** ಪ್ರತಿ ಫಲಾನುಭವಿಗೆ ರೂ.50,000/-ಗಳು
- **ಬಡ್ಡಿ ದರ:** ವಾರ್ಷಿಕ ಶೇ.4ರಷ್ಟು
- ಮರುಪಾವತಿ ಅವಧಿ:- 48 ತಿಂಗಳು(16 ತ್ರೈಮಾಸಿಕ)
- ವಾರ್ಷಿಕ ಆದಾಯದ ಮಿತಿ:- ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳಿಗಿಂತ ಕಡಿಮೆ ಇರಬೇಕು.

**ಸಾಲದ ವಿವರ:-**

| | | |
|---|---|---|
| 1. | ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | :ಶೇ.95ರಷ್ಟು |
| 2. | ಫಲಾನುಭವಿ ವಂತಿಕೆ | :ಶೇ 5ರಷ್ಟು |
| 3. | ಗರಿಷ್ಠ ಸಾಲದ ಮೊತ್ತ ಪ್ರತಿ ಫಲಾನುಭವಿಗೆ | :ರೂ.50,000/- |
| 4. | ಬಡ್ಡಿ ದರ | :ವಾರ್ಷಿಕ ಶೇ.4 |
| 5. | ಮರುಪಾವತಿ ಅವಧಿ | :03 ತಿಂಗಳಿಗೊಮ್ಮೆ<br>48 ಮಾಸಿಕ ಕಂತುಗಳು(16 ತ್ರೈಮಾಸಿಕ) |

## 8. **ಶಿಲ್ಪ ಸಂಪದ:-**

ಹಿಂದುಳಿದ ವರ್ಗಗಳ ಸಾಂಪ್ರದಾಯಿಕ ವೃತ್ತಿದಾರರಿಗೆ ತಮ್ಮ ವೃತ್ತಿ ಕೌಶಲ್ಯತೆ ಹೆಚ್ಚಿಸಲು ಅಗತ್ಯವಿರುವ with latest technological inputs ಮತ್ತು ಸಾಲದ ನೆರವು ಒದಗಿಸುವುದು.

- **ಗರಿಷ್ಠ ಸಾಲದ ಮೊತ್ತ:-** ಪ್ರತಿ ಫಲಾನುಭವಿಗೆ ರೂ.10,00,000/-ಗಳು
- **ಬಡ್ಡಿದರ:-** ರೂ.5.00ಲಕ್ಷದವರೆಗೆ ವಾರ್ಷಿಕ ಶೇ.6ರಷ್ಟು ರೂ.5.00 ರಿಂದ 10.00 ಲಕ್ಷದ ವರೆಗೆ ವಾರ್ಷಿಕ ಶೇ.8ರಷ್ಟು
- **ಮರುಪಾವತ ಅವಧಿ:** ಗರಿಷ್ಠ 10 ವರ್ಷಗಳು.
- **ವಾರ್ಷಿಕ ಆದಾಯದ ಮಿತಿ:** ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ ರೂ.81,000/-ಗಳಿಗಿಂತ ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,03,000/-ಗಳಿಗಿಂತ ಕಡಿಮೆ ಇರಬೇಕು.

- ಸಾಲದ ವಿವರ:-
  1. ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :ಶೇ.85ರಷ್ಟು
  2. ಡಿ.ಬಿ.ಸಿ.ಡಿ.ಸಿ ಪಾಲಿನ ವಂತಿಕೆ :ಶೇ.10 ರಷ್ಟು
  3. ಫಲಾನುಭವಿ ವಂತಿಕೆ :ಶೇ 5ರಷ್ಟು

**2014-15ರ ಸಾಲಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳಿಸುವ ಯೋಜನವಾರು ಘಟಕ ವೆಚ್ಚ.**

(ಲಕ್ಷ.ರೂ.ಗಳಲ್ಲಿ)

| ಯೋಜನೆಗಳ ಹೆಸರು | ಘಟಕ ವೆಚ್ಚ ಗರಿಷ್ಠ | ಫ.ಗಳ ಸಂಖ್ಯೆ | ಎನ್.ಬಿ.ಸಿ ಪಾಲಿನ ಮೊತ್ತ 85% | ಡಿ.ಬಿ.ಸಿ. ಪಾಲಿನ ಮೊತ್ತ 10% | ಒಟ್ಟು ಸಾಲ |
|---|---|---|---|---|---|
| **ಅವಧಿ ಸಾಲಗಳು:**<br>1. ಕೃಷಿ ಮತ್ತು ಕೃಷಿ ಅವಲಂಭಿತ ಚಟುವಟಿಕೆಗಳು(7.03%) | 10.00 | 614 | 182.75 | 37.83 | 220.58 |
| 2. ಸಣ್ಣ ವ್ಯಾಪಾರ (6.54%) | | 571 | 170.00 | 20.00 | 190.00 |
| 3. ಸೇವಾ ವಲಯ (1.94%) | | 171 | 51.00 | 6.00 | 57.00 |
| 4. ಸಾರಿಗೆ ವಲಯ (6.54%) | | 135 | 170.00 | 20.00 | 190.00 |
| 5. ನ್ಯೂ ಸ್ವರ್ಣಿಮಾ (5.48%) | 0.50 | 500 | 142.50 | 7.50 | 150.00 |
| **ಒಟ್ಟು** | | **1991** | **716.25** | **91.33** | **807.58** |
| **ಶೈಕ್ಷಣಿಕ ಸಾಲ ಯೋಜನೆ** | | | | | |
| ಅ) ಭಾರತದಲ್ಲಿ (2.02%) (ಕೋರ್ಸ್ ಅವಧಿಗೆ ಗರಿಷ್ಠ ರೂ.10.00 ಲಕ್ಷ) | 2.50 ಪ್ರತಿ ವರ್ಷಕ್ಕೆ | 62 | (90%) 52.50 | (50%) 6.17 | 58.67 |
| ಆ) ವಿದೇಶದಲ್ಲಿ (0.43%) (ಕೋರ್ಸ್ ಅವಧಿಗೆ ಗರಿಷ್ಠ ರೂ.20.00 ಲಕ್ಷ) | 2.50 ಪ್ರತಿ ವರ್ಷಕ್ಕೆ | 5 | (90%) 11.25 | (5%) 1.25 | 12.50 |
| **ಒಟ್ಟು** | | **67** | **63.75** | **7.42** | **71.17** |
| ಮಹಿಳಾ ಸಮೃದ್ಧಿ ಯೋಜನೆ (46.95%) | 1.00 | 5100 | (90%) 1211.25 | (5%) 63.75 | (100%) 1275.00 |
| ಮೈಕ್ರೋ ಫೈನಾನ್ಸ್ (21.13%) | 0.50 | 2034 | (90%) 549.25 | (5%) 30.50 | 579.75 |
| ಸ್ವಯಂ ಸಕ್ಷಮ (0.65%) | 10.00 | 10 | 17.00 | 2.00 | 19.00 |
| ಕೃಷಿ ಸಂಪದ (1.14%) | 0.50 | 100 | 29.75 | 3.50 | 33.25 |
| ಶಿಲ್ಪ ಸಂಪದ (0.65%) | 10.00 | 30 | 12.75 | 1.50 | 14.25 |

| ಒಟ್ಟು | | 9332 | 2600.00 | 200.00 | 2800.00 |
|---|---|---|---|---|---|

**ಅವಧಿ ಸಾಲಗಳಿಗೆ ವಿಧಿಸುವ ಬಡ್ಡಿದರ ಮತ್ತು ಮರುಪಾವತಿ ಕಂತುಗಳು:**

| ಕ್ರ ಸಂ | ಯೋಜನೆಯ ಹೆಸರು | ವಿಧಿಸುವ ವಾರ್ಷಿಕ ಬಡ್ಡಿ | | ಮರುಪಾವತಿ ಕಂತುಗಳ ಸಂಖ್ಯೆ |
|---|---|---|---|---|
| | | ರೂ.5.00 ಲಕ್ಷಗಳ ವರೆಗೆ | ರೂ.5.00 ಲಕ್ಷಗಳ ಮೇಲ್ಪಟ್ಟು | |
| 1 | ವ್ಯವಸ್ಥಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು (ಹೈನುಗಾರಿಕೆ, ಮೀನುಗಾರಿಕೆ ಇತ್ಯಾದಿ ಕೃಷಿ ಅವಲಂಬಿತ ಚಟುವಟಿಕೆಗಳಿಗೆ | 6% | 8% | 34 ತಿಂಗಳು |
| 2 | ಸಣ್ಣ ವ್ಯಾಪಾರ | 6% | 8% | 45 ತಿಂಗಳು |
| 3 | ಸೇವಾ ವಲಯ/ಕುಶಲಕರ್ಮಿ | 6% | 8% | 34 ತಿಂಗಳು |
| 4 | ಸಾರಿಗೆ ವಲಯ(ಆಟೋರಿಕ್ಷಾ ಗೂಡ್ಸ್ ಆಟೋರಿಕ್ಷಾ) | 6% | 8% | 58 ತಿಂಗಳು |
| 5 | ನ್ಯೂ ಸ್ವರ್ಣಿಮಾ ಯೋಜನೆ | 5% | - | 34-60 ತಿಂಗಳು |
| 6 | ಶೈಕ್ಷಣಿಕ ಸಾಲ ಯೋಜನೆ | 4% | 8% | 34-60 ತಿಂಗಳು |
| 7 | ಸಕ್ಷಮ ಯೋಜನೆ | 6% | 8% | 34-108 ತಿಂಗಳು |
| 8 | ಮೈಕ್ರೋ ಫೈನಾನ್ಸ್ | 5% | - | 34-48 ತಿಂಗಳು |
| 9 | ಶಿಲ್ಪ ಸಂಪದ | 6% | 8% | 34-108 ತಿಂಗಳು |
| 10 | ಕೃಷಿ ಸಂಪದ | 4% | - | 34-48 ತಿಂಗಳು |
| 11 | ಮಹಿಳಾ ಸಮೃದ್ಧಿ ಯೋಜನೆ | 4% | - | 34-48 ತಿಂಗಳು |

## ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿಯಿಂದ ಒದಗಿಸುವ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುವ ಕಾರ್ಯಕ್ರಮಗಳು:

**1.** ಅಲೆಮಾರಿ/ಅರೆ ಅಲೆಮಾರಿ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ:- ಕರ್ನಾಟಕ ರಾಜ್ಯದ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿಯು ನಿಗಮಕ್ಕೆ 2013-14ನೇ ಸಾಲಿಗೆ ಮಾರ್ಚ್-2014ರ ಅಂತ್ಯದಲ್ಲಿ ಒದಗಿಸಿದ ರೂ.10.00 ಕೋಟಿಗಳಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆಗೆ ರೂ.6.50ಕೋಟಿಗಳನ್ನು ನಿಗದಿಪಡಿಸಲಾಗಿದೆ. ಈ ಮೊತ್ತದಲ್ಲಿ ಸರ್ಕಾರದ ಆದೇಶ ಸಂಖ್ಯೆ ಪಿ.ಹೆಚ್.ಎಸ್/262/ಎಸ್.ಇ.ಡಬ್ಲ್ಯೂ/65/ ದಿನಾಂಕ 01/2/1966ರನ್ವಯ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ **1) ಬೈರಾಗಿ (ಬಾವ), 2) ಬಾಲ ಸಂತೋಷಿ-ಜೋಷಿ, 3)ಬಾಜಿಗರ್, 4)ಭರಡಿ,**

**5)ಬುಡಬುಡಕಿ-ಜೋಶಿ-ಗೋಂಧಳಿ, 6)ಚಾರ, 7)ಚಿತ್ರಕರ್ತಿ-ಜೋಶಿ, 8)ಧೋಲಿ, 9)ದವೇರಿ, 10)ದೊಂಬರಿ, 11)ಘಿಸಾಡಿ, 12)ಗರುಡಿ, 13)ಗೋಪಾಲ್, 14) ಗೋಂಧಳಿ, 15)ಹೆಳವ, 16)ಜೋಗಿ, 17) ಕೆಲ್ ಕರಿ, 18)ಕೋಲ್ ಹಾಟಿ, 19)ನಂದಿವಾಲ-ಜೋಶಿ-ಘೋಂಧಳಿ, ಫುಲ್-ಮಲ್ಲಿ, 20)ನಾಥಪಂಥಿ-ಡೌರಿ-ಗೋಸಾವಿ 21) ನೀರ್ ಶಿಕಾರಿ, 22)ಪಂಗುಲ್. 23)ಜೋಶಿ (ಸಾದ ಜೋಶಿ), 24)ಸನ್ ಸಿಯ, 25)ಸರನಿಯ, 26) ತಿರುಮಲಿ, 27) ವೈಡು, 28)ವಾಸುದೇವ್, 29)ವಡಿ, 30)ವಗ್ರಿ, 31)ವಿರ್, 32)ಬಜನಿಯ, 33)ಶಿಕ್ಕಲ್ ಗಾರ, 34)ಗೊಲ್ಲ, 35)ಕಿಳ್ಳಿಕ್ಯಾತಸ್, 36)ಸರೋಡಿ, 37)ದುರ್ಗಾಮುರ್ಗ(ಬುರ್ ಬುರ್ ಚ), 38)ಹಾವಗಾರ್(ಹಾವಾಡಿಗರ್) 39)ಪಿಚಗುಂಟಲ, 40)ಮಸನಿಯ ಯೋಗಿ, 40)ಬೆಸ್ತರ್ 41)ಬುಂಡ ಬೆಸ್ತ, 42)ಕಟಬು, 43)ಕಾಶಿಕಪ್ ಡಿ, 44)ದೊಂಬಿದಾಸ ಮತ್ತು 45)ಬೈಲ್ ಪತ್ತಾರ್** ಜನಾಂಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ಘಟಕ ವೆಚ್ಚಗಳ ಅನ್ವಯ ನೀರಾವರಿ ಸೌಲಭ್ಯ ಒದಗಿಸುವುದು.

2. **ಅಲೆಮಾರಿ/ಅರೆ ಅಲೆಮಾರಿ ಭೂ ಖರೀದಿ ಯೋಜನೆ:-** ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ಕನಿಷ್ಠ 1 ಎಕರೆ ತರಿ ಭೂಮಿ ಅಥವಾ 2 ಎಕರೆ ಖುಷ್ಕಿ ಜಮೀನನ್ನು ಕೊಂಡುಕೊಳ್ಳಲು ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. ಘಟಕ ವೆಚ್ಚ ರೂ.5.00ಲಕ್ಷಗಳನ್ನು ನಿಗದಿಪಡಿಸಿದೆ. ಈ ಮೊತ್ತದಲ್ಲಿ ಶೇ.50ರಷ್ಟು ಸಹಾಯಧನ ಹಾಗೂ ಉಳಿಕೆ ಶೇ.50ರಷ್ಟು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದು.

3. **ಅಲೆಮಾರಿ/ಅರೆ ಅಲೆಮಾರಿ ಶೈಕ್ಷಣಿಕ ನೇರ ಸಾಲ ಯೋಜನೆ:-** ಅಲೆಮಾರಿ/ಅರೆಅಲೆಮಾರಿ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬದ ವಾರ್ಷಿಕ ಆದಾಯ ರೂ.3.50ಲಕ್ಷಗಳ ಮಿತಿಯಲ್ಲಿದ್ದು, ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ(ಸಿ.ಇ.ಟಿ) ಪ್ರವೇಶ ಪಡೆದು, (1)ಬಿ.ಇ(ಸಿ.ಇ.ಟಿ), (2)ಎಂ.ಬಿ.ಬಿ.ಎಸ್, (3) ಬಿ.ಯೂ.ಎಂ.ಎಸ್., 4) ಬಿ.ಡಿ.ಎಸ್. 5)ಬಿ.ಎ.ಎಂ.ಎಸ್, 6) ಬಿ.ಎಚ್.ಎಂಎಸ್. 7)ಎಂ.ಬಿ.ಎ 8)ಎಂ.ಟೆಕ್, 9)ಎಂ.ಇ, 10) ಎಂ.ಡಿ, 11)ಪಿ.ಹೆಚ್.ಡಿ 12) ಬಿ.ಸಿ.ಎ/ಎಂ.ಸಿ.ಎ 13)ಎಂ.ಎಸ್.ಆಗ್ರಿಕಲ್ಚರ್ 14) ಬಿ.ಎಸ್.ಸಿ ನರ್ಸಿಂಗ್, 15) ಬಿ.ಫಾರಂ 16)ಬಿ.ಎಸ್.ಸಿ ಪ್ಯಾರಾ ಮೆಡಿಕಲ್ 17) ಬಿ.ಎಸ್.ಸಿ. ಬಯೋ ಟೆಕ್ನಾಲಜಿ 18)ಬಿ.ಟೆಕ್ 19)ಬಿ.ಪಿ.ಟಿ. 20)ಬಿ.ಬಿ.ಎಸ್.ಸಿ/ಎಂ.ವಿ.ಎಸ್.ಸಿ 21) ಬಿ.ಎನ್.ಎಂ 22)ಬಿ.ಹೆಚ್.ಎಮ್. 23)ಎಂಡಿ.ಎಸ್ ಬಯೋ ಟೆಕ್ನಾಲಜಿ ಮತ್ತು 28)ಎಂ.ಎಸ್.ಸಿ(ಎ.ಜಿ) ಕೋರ್ಸ್ ಗಳಲ್ಲಿ ಉಚಿತ ಸೀಟ್ ಪಡೆದು ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಕೋರ್ಸ್ನ ಅವಧಿಗೆ ಶೇಕಡ 2ರ ಬಡ್ಡಿ ದರದಲ್ಲಿ ಗರಿಷ್ಠ ವಾರ್ಷಿಕ 1.00 ಲಕ್ಷಗಳ ವರೆಗೆ ಸಾಲ ಮಂಜೂರು ಮಾಡುವುದು.

## ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಆಯಾ

## ಯೋಜನೆಗಳನುಸಾರವಾಗಿ ಸಲ್ಲಿಸಬೇಕಾದ ದಾಖಲೆಗಳು.

1. ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆ.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ. (5 ವರ್ಷಗಳ ಅವಧಿ ಒಳಗಿರಬೇಕು, ಮೂಲ ಪ್ರತಿ ಲಗತ್ತಿಸಬೇಕು)
3. ವಿಳಾಸ ದೃಢೀಕರಣಕ್ಕೆ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಕೆ.ಪಿ.ಟಿ.ಸಿ.ಎಲ್.ಆರ್.ಆರ್. ನಂಬರ್ ಇರುವ ಬಿಲ್ಲಿನ ಜೆರಾಕ್ಸ್ ಪ್ರತಿ/ಆಧಾರ ಕಾರ್ಡ್ನ ಜೆರಾಕ್ಸ್ ಪ್ರತಿ.
4. ಪಾಸ್ ಪೋರ್ಟ್ ಅಳತೆಯ 5 ಭಾವಚಿತ್ರಗಳು.
5. ಸಾಲದ ಉದ್ದೇಶದ ಅನುಭವದ ಮತ್ತು ಘಟಕ ಸ್ಥಾಪಿಸುವ ಸ್ಥಳದ ಬಗ್ಗೆ ಸ್ವಯಂ ಘೋಷಣೆ.
6. ಆಯ್ಕೆ ಸಮಿತಿಯಿಂದ ಆಯ್ಕೆ ಆದ ನಂತರ ಆಯ್ಕೆಯಾದ ಅರ್ಜಿದಾರರು ಸ್ಥಳೀಯ ಬ್ಯಾಂಕ್/ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದಿಲ್ಲ ಎಂಬುದಕ್ಕೆ ಅಥವಾ ಪಡೆದಿರುವ ಸಾಲವನ್ನು ಪೂರ್ಣ ಮರುಪಾವತಿ ಮಾಡಿರುವ ಬಗ್ಗೆ ಬೇಬಾಕಿ ಪತ್ರ.
7. ಅರ್ಜಿದಾರರ ಆಸ್ತಿ ಮತ್ತು ಋಣಭಾರದ(ಸಾಲಗಳ ಬಗ್ಗೆ) ಘೋಷಣೆ.
8. ಸಾಲದ ಭದ್ರತೆಗೆ ಅರ್ಜಿದಾರರು ಒದಗಿಸುವ ಜಾಮೀನುದಾರರ ಒಪ್ಪಿಗೆ ಪತ್ರ ಮತ್ತು ಆಸ್ತಿ ಋಣಭಾರದ ಘೋಷಣೆ.
9. ಸಾಲದ ಭದ್ರತೆಗೆ ಜಾಮೀನು ನೀಡುವವರು ಸರ್ಕಾರಿ ನೌಕರರಾಗಿದ್ದಲ್ಲಿ ಕನಿಷ್ಠ 5 ವರ್ಷ ಸೇವಾವಧಿ ದೃಢೀಕರಣ ಹಾಗೂ ರೂ.25,000/-ಗಳಿಗಿಂತ ಹೆಚ್ಚಿನ ವೇತನ ಪಡೆಯುತ್ತಿರುವ ಬಗ್ಗೆ ವೇತನ ದೃಢೀಕರಣ ಪತ್ರ.
10. ಘಟಕಗಳಿಗೆ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿಗಳಿಂದ ಲೈಸೆನ್ಸ್/ಪರವಾಗಿ ಪತ್ರ.
11. ಸಾರಿಗೆ ವಲಯದಲ್ಲಿ ಸಾಲ ಪಡೆಯಲು ಡ್ರೈವಿಂಗ್ ಲೈಸೆನ್ಸ್(ಜೆರಾಕ್ಸ್ ಪ್ರತಿ)
12. ಸಾಂಪ್ರದಾಯಿಕ ವೃತ್ತಿ ನಿರ್ವಹಿಸುತ್ತಿರುವ ಬಗ್ಗೆ ಸ್ವಯಂ ಘೋಷಣ ಪತ್ರ.
13. ರೂ.50,000/-ಗಳಿಗಿಂತ ಹೆಚ್ಚಿನ ಸಾಲದ ಭದ್ರತೆಗೆ ನಿಗಮಕ್ಕೆ ಸ್ಥಿರಾಸ್ತಿಯನ್ನು ಆಧಾರ ಮಾಡಬೇಕು. ಅರ್ಜಿದಾರರ ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯ ದಾಖಲಾತಿಗಳಾದ, ಮೂಲ ಕ್ರಯ ಪತ್ರ, 3 ವರ್ಷಗಳ ಪಹಣಿ, ಖಾತ ಉದ್ಧರಣೆ, 13 ವರ್ಷಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಸ್ಥಿರಾಸ್ತಿ ಮೌಲ್ಯ ನಿರ್ಣಯ ಪತ್ರ, ಕಂದಾಯ ಪಾವತಿ ರಶೀದಿ ಇತ್ಯಾದಿ.
14. ರಾಷ್ಟ್ರೀಕೃತ/ಶೆಡ್ಯೂಲ್/ಗ್ರಾಮೀಣ ಬ್ಯಾಂಕ್ ನಲ್ಲಿ ಫಲಾನುಭವಿಯು ಹೊಂದಿರುವ ಬ್ಯಾಂಕ್ ಖಾತಾ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್ ಹೊಂದಿದ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
15. ಶೈಕ್ಷಣಿಕ ಸಾಲ ಯೋಜನೆಗೆ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ವ್ಯಾಸಂಗದ ದೃಢೀಕರಣ ಪತ್ರ.
16. ವಿದ್ಯಾರ್ಥಿ ಮೆರಿಟ್ ಆಧಾರದ ಮೇಲೆ ಸೀಟು ಪಡೆದಿರುವ ಬಗ್ಗೆ ಸಿ.ಇ.ಟಿ.ಯವರು ನೀಡಿರುವ ಸೀಟು ಹಂಚಿಕೆ ಪತ್ರ.
17. ಗಂಗಾಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಪಡೆಯಲು ಅರ್ಜಿದಾರರು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು. ಈ ಬಗ್ಗೆ ಸಂಬಂಧಿಸಿದ ತಹಶೀಲ್ದಾರ್/ಕಂದಾಯ ಅಧಿಕಾರಿಗಳಿಂದ ಪಡೆದ ದೃಢೀಕೃತ ಪ್ರಮಾಣ ಪತ್ರ.
18. ಗಂಗಾಕಲ್ಯಾಣ ಯೋಜನೆಯಲ್ಲಿ ಏತನೀರಾವತಿ ಯೋಜನೆ ಭೂಮಟ್ಟದಲ್ಲಿ ದೊರೆಯುವ ನೀರಿನ್ನು ಬಳಸಿಕೊಳ್ಳಲು ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಅನುಮತಿ ಪತ್ರ.
19. ನಿಗಮದಿಂದ ಈಗಾಗಲೇ ಯಾವುದೇ ಯೋಜನೆಗಳಲ್ಲಿ ಸೌಲಭ್ಯ ಪಡೆದಿಲ್ಲವೆಂದು ಸ್ವಯಂ ಘೋಷಣೆ ಪತ್ರ.

## ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮತ್ತು ಮಂಜೂರಾತಿ ವಿಧಾನ

ಸರ್ಕಾರದ ಆದೇಶ ಸಂಖ್ಯೆ:ಸಕಇ/221/ಬಿಸಿಎ/2008, ದಿನಾಂಕ:02-01-2009ರ ಆದೇಶದನ್ವಯ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳ ಮತ್ತು ಗಂಗಾಕಲ್ಯಾಣ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| | | |
|---|---|---|
| 1 | ವಿಧಾನ ಸಭಾ ಕ್ಷೇತ್ರ ಶಾಸಕರು | ಅಧ್ಯಕ್ಷರು. |
| 2 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 3 | ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ | ಸದಸ್ಯರು |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) | ಸದಸ್ಯರು |
| 7 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ. | ಸದಸ್ಯರು |
| 8 | ಸಬಂಧಿಸಿದ ತಾಲ್ಲೂಕು ತಹಶೀಲ್ದಾರರು | ಸದಸ್ಯರು |
| 9 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 10 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 11 | ಸಂಬಂಧಿಸಿದ ಜಿಲ್ಲೆಯ ಅರಣ್ಯಾಧಿಕಾರಿ | ಸದಸ್ಯರು |
| 12 | ಹಿಂದುಳಿದ ವರ್ಗಗಳ ಇಲಾಖೆಯ ನಿರೀಕ್ಷಕರು | ಸದಸ್ಯರು |
| 13 | ಲೀಡ್ ಬ್ಯಾಂಕ್ ಆಫೀಸರ್/ಪ್ರತಿನಿಧಿ | ಸದಸ್ಯರು |
| 14 | ಸಹಕಾರ ಸಂಘಗಳ ಸಹಾಯಕ ನಿಬಂಧಕರು | ಸದಸ್ಯರು |
| 15 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು | ಸದಸ್ಯರು |
| 16 | ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಭಿವೃದ್ಧಿ ಅಧಿಕಾರಿ/ಅಭಿವೃದ್ಧಿ ಸಹಾಯಕರು (ಆಯಾ ನಿಗಮಕ್ಕೆ ಸಂಬಂಧಿಸಿದವರು) | ಸದಸ್ಯ ಕಾರ್ಯದರ್ಶಿಗಳು |

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ (1) ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ (2) ಅರಿವು-ಶೈಕ್ಷಣಿಕ ಸಾಲ ಯೋಜನೆ, (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು, ದಿನಾಂಕ: 25/02/2013ರ ಆದೇಶದಲ್ಲಿ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, | ಅಧ್ಯಕ್ಷರು. |
| 2. | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3. | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |

| | | |
|---|---|---|
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. | ಸದಸ್ಯರು |
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪ ನಿಬಂಧಕರು, | ಸದಸ್ಯರು |
| 7 | ಜನರಲ್ ಮ್ಯಾನೇಜರ್ (ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ರಚಿಸಿರುವ ಎರಡು ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಕಇ/36/ಬಿಸಿಎ/2012, ದಿನಾಂಕ 12/04/2012ರಲ್ಲಿ ಸಮಾಜ ಕಲ್ಯಾಣ ವ್ಯಾಪ್ತಿಯ ಅಡಿಯಲ್ಲಿ ಬರುವ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಕಟ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳ ಆಯ್ಕೆ ಹಾಗೂ ಮರು ಪಾವತಿ ಬಗ್ಗೆ ಆಯ್ಕೆ ಸಮಿತಿಯು ಅನುಸರಿಸಬೇಕಾದ ಮಾರ್ಗಸೂಚಿಗಳು:

## ಆಯ್ಕೆಯ ವಿಧಾನ ಮತ್ತು ಮಾರ್ಗಸೂಚಿಗಳು:

1. ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಆಯವ್ಯಯವನ್ನು ಅವಲಂಭಿಸಿ ವಿಧಾನಸಭಾ ಕ್ಷೇತ್ರವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಮೇ/ಜೂನ್ ತಿಂಗಳಲ್ಲಿಯೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಿಳಿಸತಕ್ಕದ್ದು,
2. ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ, (ಗಂಗ ಕಲ್ಯಾಣ ಯೋಜನೆಯನ್ನು ಸೇರಿಸಿ) ಆಯಾ ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳು ವರ್ಷದ ಮೇ/ಜೂನ್ ತಿಂಗಳಗಳಲ್ಲಿ ಪತ್ರಿಕಾ ಪ್ರಕಟಣೆಗಳ ಮುಖಾಂತರ ಮತ್ತು ಕರಪತ್ರಗಳ ಮುಖಾಂತರ ವಿವಿಧ ಚಟುವಟಿಕೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವುದು.
3. ವಿವಿಧ ಯೋಜನೆಗಳಿಗೆ ಅರ್ಜಿಗಳನ್ನು ಮುದ್ರಿಸಿ ಫಲಾನುಭವಿಗಳಿಗೆ ಲಭ್ಯವಾಗುವಂತೆ ವ್ಯವಸ್ಥಾ ಮಾಡತಕ್ಕದ್ದು,
4. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು 19-07-2014ನೇ ತಾರೀಖು ಎಂದು ನಿಗದಿಪಡಿಸಿದೆ. ಕೊನೆಯ ತಾರೀಖಿನ ನಂತರ ಬಂದ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ. ಕಳೆದ ಸಾಲಿನಲ್ಲಿ ಸಾಲ ಮಂಜೂರಾಗದೇ ಇರುವ ಅರ್ಹ ಅರ್ಜಿದಾರರು 2014-15ನೇ ಸಾಲಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಈಗಾಗಲೇ ಸಲ್ಲಿಸಿರುವ ಅರ್ಜಿ ಮತ್ತು ದಾಖಲೆಗಳನ್ನು ಪ್ರಸಕ್ತ ಸಾಲಿಗೆ ಪರಿಗಣಿಸಲಾಗುವುದು.
5. ಆಯಾ ದಿನ ಬಂದ ಅರ್ಜಿಗಳನ್ನು ಆಯಾ ದಿನವೇ ಜಿಲ್ಲಾ ವ್ಯವಸ್ಥಾಪಕರುಗಳು ಕ್ರಮ ಸಂಖ್ಯೆ ನೀಡಿ ತಾಲ್ಲೂಕುವಾರು/ಕ್ಷೇತ್ರವಾರು ಕಂಪ್ಯೂಟರ್ ನಲ್ಲಿ ಅರ್ಜಿದಾರರ ಹೆಸರುಗಳನ್ನು ನಮೂದಿಸುವುದು.
6. ಬಂದಿರುವ ಅರ್ಜಿಗಳನ್ನು ಆಯಾ ಯೋಜನೆಗಳಿಗೆ ನಿಗದಿಪಡಿಸಿದ ಅರ್ಹತೆಗಳು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಸಿ ಅರ್ಹತೆ ಹೊಂದಿರುವವರ ಪಟ್ಟಿಯನ್ನು ತಯಾರಿಸಿ ಕಂಪ್ಯೂಟರೀಕರಣ ಮಾಡುವುದು. ಅನರ್ಹರಾಗಿರುವ ಅರ್ಜಿಗಳನ್ನು ಸಹಪಟ್ಟಿ ಮಾಡುವುದು.
7. ಕಳೆದ ಸಾಲಿನಲ್ಲಿ ಸಾಲ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಸಾಲ ಮಂಜೂರಾಗದೇ ಇದ್ದಲ್ಲಿ, ಅಂತಹ ಅರ್ಜಿಗಳನ್ನು ಸಹ 2014-15ನೇ ಸಾಲಿಗೆ ಹೊಸದಾಗಿ ಸಲ್ಲಿಸಿರುವ ಅರ್ಜಿಗಳೊಂದಿಗೆ ಪಟ್ಟಿ ಮಾಡಿ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಆದ್ಯತೆ ನೀಡಬೇಕು.
8. ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದು, ಆಯ್ಕೆ ಸಮಿತಿಯನ್ನು ಆಗಸ್ಟ್ ಮಾಹೆಯೊಳಗೆ ಆಯ್ಕೆ ಸಮಿತಿ ಸಭೆ ನಡೆಸಿ, ಫಲಾನುಭವಿಗಳನ್ನು ಮಾಡುವುದು. ಆಯ್ಕೆ ಸಮಿತಿ ಸಭೆಯನ್ನು ಸರ್ಕಾರದ ಕಛೇರಿ/ಸ್ಥಳಗಳಲ್ಲಿ ಮಾತ್ರ ನಡೆಸತಕ್ಕದ್ದು,

9. ಅರ್ಹ ಅರ್ಜಿದಾರರ ಪಟ್ಟಿಯನ್ನು ಮತ್ತು ಅನರ್ಹ ಅರ್ಜಿಗಳ ಪಟ್ಟಿಯನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಿ, ಆಯಾ ಕ್ಷೇತ್ರಕ್ಕೆ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಅರ್ಹ ಅರ್ಜಿದಾರರನ್ನು ಆಯ್ಕೆ ಮಾಡಬೇಕು ಹಾಗೂ ಶೇ.10ರಷ್ಟು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಕ್ರಮಬದ್ದವಾಗಿರುವುದಿಲ್ಲ. ಈ ಆಯ್ಕೆಯನ್ನು ಮಂಜೂರಾತಿಗೆ ಪರಿಗಣಿಸಬಾರದು. ಅನರ್ಹ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡತಕ್ಕದ್ದು, ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಂದ ಫಲಾನುಭವಿಗಳ ಆಯ್ಕೆಯನ್ನು ಆಗಸ್ಟ್-2014ರೊಳಗೆ ಪೂರ್ಣಗೊಳಿಸಬೇಕು.

10. **ಆಗಸ್ಟ್-2014ರ ಅಂತ್ಯದೊಳಗೆ ಸದರಿ ಸಮಿತಿಗಳು ಆಯ್ಕೆ ಮಾಡದೇ ಇದ್ದಲ್ಲಿ ಅದನ್ನು ಸರ್ಕಾರಕ್ಕೆ ತಿಳಿಸತಕ್ಕದ್ದು ಮತ್ತು ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕ್ರಮ ಜರುಗಿಸಲಾಗುವುದು.**

11. ಬ್ಯಾಂಕಿನ ಮೂಲಕ ಅನುಷ್ಠಾನಗೊಳಿಸುವ ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆಯಲ್ಲಿ ನಿಗದಿಪಡಿಸಿದ ಜಿಲ್ಲಾವಾರು/ಕ್ಷೇತ್ರವಾರು ಗುರಿಯನ್ನು ಆಯಾ ಜಿಲ್ಲೆ ಲೀಡ್ ಬ್ಯಾಂಕ್ ಮೂಲಕ ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಮಂಡಿಸಿ ಬ್ಯಾಂಕ್ ವಾರು/ಶಾಖಾವಾರು ಗುರಿಯನ್ನು ನಿಗದಿಪಡಿಸಿದ ಗುರಿಯಂತೆ ಅರ್ಜಿಗಳನ್ನು ಶಿಫಾರಸ್ಸು ಮಾಡುವ ಬಗ್ಗೆ ಸಮಿತಿಯ ಅನುಮೋದನೆ ಪಡೆಯುವುದು. ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಅನುಮೋದನೆ ಪಡೆದ ಫಲಾನುಭವಿಗಳ ಅರ್ಜಿಗಳನ್ನು ವಾಣಿಜ್ಯ ಬ್ಯಾಂಕ್ ಗಳಿಗೆ ಮತ್ತು ಆರ್.ಆರ್.ಬಿ.ಗಳಿಗೆ ಸಾಲ ಮಂಜೂರಾತಿಗಾಗಿ ತಕ್ಷಣವೇ ಕಳುಹಿಸುವುದು. ಸಂಬಂಧಿಸಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಡಿ.ಎಲ್.ಬಿ.ಸಿ/ಬಿ.ಎಲ್.ಬಿ.ಸಿ. ಬ್ಯಾಂಕ್ ಗಳ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಅರ್ಜಿಗಳಿಗೆ ಮಂಜೂರಾತಿ ಪಡೆಯಲು ಕ್ರಮವಹಿಸತಕ್ಕದ್ದು.

12. ಸೌಲಭ್ಯ ಕೋರಿ ಬರುವ ಅರ್ಜಿದಾರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಲ್ಲಾ ಉಪಜಾತಿಗಳಿಗೂ ಪ್ರತಿನಿಧ್ಯತೆ ನೀಡುವುದು. ವಿಶೇಶವಾಗಿ ಅತೀ ಹಿಂದುಳಿದ ಸಮುದಾಯಗಳಿಗೆ ಆದ್ಯತೆ ನೀಡಬೇಕು.

13. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಆದೇಶ ಸಂಖ್ಯೆ:ಸಕಇ/573/ಬಿಸಿಎ/1995, ದಿನಾಂಕ 23/2/1996ರಲ್ಲಿ ನಿಗದಿಪಡಿಸಿರುವ ಮೀಸಲಾತಿಯಂತೆ ಪ್ರವರ್ಗ-1 ಮತ್ತು 2ಎಗೆ ಶೇಕಡ 70ರಷ್ಟು ಪ್ರವರ್ಗ 3ಎ ಮತ್ತು 3ಬಿಗೆ ಶೇಕಡ 30ರಷ್ಟು ಆಯ್ಕೆ ಮಾಡತಕ್ಕದ್ದು, ಪ್ರವರ್ಗ 1 ಮತ್ತು 2ಎನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಹಾಗೂ ಇತರೆ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಹಾಗೂ ಈವರೆಗೂ ನಿಗಮದಿಂದ ಸೌಲಭ್ಯವನ್ನು ಪಡೆಯದೇ ಇರುವ ಜಾತಿಗಳಿಗೆ ಆದ್ಯತೆ ನೀಡುವುದು.

14. **ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶೇಡಕ 40ರಷ್ಟು ಮಹಿಳೆಯರಿಗೆ ಮತ್ತು ಶೇಕಡಾ 3ರಷ್ಟು ಅಂಗವಿಕಲರಿಗೆ ಆಯ್ಕೆ ಮಾಡುವುದು.**

15. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಅಂತರ್ಜಲ ಲಭ್ಯವಿರುವ ಪ್ರದೇಶಗಳಿಗೆ ಮತ್ತು ಶಾಶ್ವತ ನೀರಾವರಿ ಇಲ್ಲದ ಪ್ರದೇಶಗಳಿಗೆ ಆದ್ಯತೆ ನೀಡುವುದು. ಅಂತರ್ಜಲ ಕುಸಿದು ಆಳದ ಮಟ್ಟಕ್ಕೆ ಹೋಗಿದ್ದ ಪ್ರದೇಶಗಳಲ್ಲಿ **(Red areas/over Exploited)** ಇತರೆ ಸ್ವಯಂ ಉದ್ಯೋಗ ಯೋಜನೆಗಳಲ್ಲಿ ಹೆಚ್ಚಿನ ಆದ್ಯತೆ ನೀಡುವುದು.

16. ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆಯಾ ಯೋಜನೆಗಳಲ್ಲಿ ಸರ್ಕಾರವು/ನಿಗಮಗಳು ಆಗಿಂದಾಗ್ಗೆ ಹೊರಡಿಸಿರುವ ಆದೇಶ ಮತ್ತು ಮಾರ್ಗಸೂಚಿಗಳ ಪ್ರಕಾರವೇ ಆಯ್ಕೆ ಮಾಡುವುದು. ಜಿಲ್ಲಾ ವ್ಯವಸ್ಥಾಪಕರುಗಳು ಮಾರ್ಗಸೂಚಿಗಳನ್ನು ಆಯ್ಕೆ ಸಭೆಯ ಗಮನಕ್ಕೆ ತಂದು ಓದಿ ನಡವಳಿಗಳಲ್ಲಿ ದಾಖಲಿಸುವುದು.

17. ಆಯಾ ಕಾರ್ಯಕ್ರಮಗಳ ಮಾರ್ಗಸೂಚಿಗಳನ್ವಯ ನಿಗದಿಪಡಿಸಿದ ದಾಖಲೆಗಳನ್ನು ಒದಗಿಸಿರುವ ಫಲಾನುಭವಿಗಳ ಅರ್ಹತೆ ಪರಿಶೀಲಿಸಿ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಆಯ್ಕೆಗೆ ಕ್ರಮ ವಹಿಸಬೇಕು. ಅರ್ಜಿಗಳನ್ನು ಸಲ್ಲಿಸದೇ ಇರುವ ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಬಾರದು. ಸಮಿತಿಯಿಂದ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಮಂಜೂರು ಮಾಡುವ ಮೊದಲು ಮಂಜೂರಾತಿ ಅಧಿಕಾರಿಗಳು ಆಯಾ

ಯೋಜನೆಗಳಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಒದಗಿಸದೆ ಇದ್ದಲ್ಲಿ ಅವುಗಳನ್ನು ಒಂದು ವಾರದೊಳಗಾಗಿ ಒದಗಿಸುವಂತೆ ಪತ್ರ ಕಳುಹಿಸಿ ಅಗತ್ಯ ದಾಖಲಾತಿಗಳನ್ನು ಪಡೆಯುವುದು. ಒಂದು ವೇಳೆ ದಾಖಲೆಗಳನ್ನು ಒದಗಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು. ಸಾಲ ಮಂಜೂರು ಮಾಡಿದ ನಂತರ ಫಲಾನುಭವಿಯ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಖಾತೆ ಸಂಖ್ಯೆ ಸೇರಿಸಿ ಕ್ರಾಸ್ಡ್ ಚೆಕ್ ಅನ್ನು ರಚಿಸಿ ಬಿಡುಗಡೆ ಮಾಡುವುದು. ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿಕೊಂಡು ಘಟಕ ಸ್ಥಾಪಿಸಿ ನಿರ್ವಹಿಸಲು ಫಲಾನುಭವಿಗೆ ತಿಳಿಸತಕ್ಕದ್ದು.

18. ಸಾಲ ಸೌಲಭ್ಯ ಬ್ಯಾಂಕ್ ಗಳಿಂದ ಮಂಜೂರು ಮಾಡಿದ್ದಲ್ಲಿ ಸಹಾಯಧನವನ್ನು ಬ್ಯಾಂಕ್ ಮುಖಾಂತರ ಸಾಲದ ಜೊತೆಗೆ ಫಲಾನುಭವಿಗಳಿಗೆ ಬ್ಯಾಂಕ್ ಗಳು ವಿತರಿಸಬೇಕು. ಒಂದು ವೇಳೆ ಬ್ಯಾಂಕ್ ಗಳು ಮಂಜೂರಾದ ಸಾಲದ ಮೊತ್ತವನ್ನು ವಿತರಿಸದೇ ಬರೀ ಸಹಾಯಧನ/ಮಾರ್ಜಿನ್ ಹಣದ ಮೊತ್ತವನ್ನು ಮಾತ್ರ ವಿತರಣೆ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ನಿಗಮದ ಕೇಂದ್ರ ಕಚೇರಿಗೆ ವರದಿ ಮಾಡಬೇಕು. ಬಿ.ಎಲ್.ಬಿ.ಸಿ ಸಭೆಯ ಗಮನಕ್ಕೆ ಕಡ್ಡಾಯವಾಗಿ ತರಬೇಕು.
19. ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ 3ನೇ ಪಾರ್ಟಿಯಿಂದ ತನಿಖೆ ಮಾಡಿಸಿ ವರದಿ ಪಡೆಯತಕ್ಕದ್ದು, ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರ ಕ್ರಮ ಜರುಗಿಸುವುದು.
20. ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ನಿಗಮದಿಂದ ಸಾಲ/ಸಹಾಯಧನ ಮಂಜೂರು ಮಾಡಿದ ಪ್ರಗತಿ ಬಗ್ಗೆ, ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಹಾಗೂ ಸಾಲ ಮರುಪಾವತಿ ಮಾಡುತ್ತಿರುವ ಬಗ್ಗೆ ಆಯ್ಕೆ ಸಮಿತಿಯು ವರ್ಷದಲ್ಲಿ ಕನಿಷ್ಟ 2 ಬಾರಿ ಸಭೆ ಸೇರಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.
21. ಮಂಜೂರಾದ ಸಾಲದ ಸದುಪಯೋಗದ ಬಗ್ಗೆ ಮರುಪಾವತಿ ಬಗ್ಗೆ ಮತ್ತು ಒದಗಿಸುವ ದಾಖಲೆಗಳ ಬಗ್ಗೆ ತಿಳುವಳಿಕೆ ಮೂಡಿಸಲು ಸಾಲ ಮಂಜೂರಾತಿ ಪೂರ್ವ ಸಮಾಲೋಚನೆ ಸಭೆಗಳನ್ನು (Pre Disbursement Counselling) ಏರ್ಪಡಿಸಬೇಕು.
22. ಸಾಲ ಮರುಪಾವತಿ ಮಾಡುವ ಬಗ್ಗೆ ಸೂಕ್ತ ಸಮಯದಲ್ಲಿ ನೋಟೀಸ್ ಗಳನ್ನು ನೀಡಿ ಮರುಪಾವತಿ ಸಂಗ್ರಹ ಕಾರ್ಯಕ್ರಗಳನ್ನು ನಡೆಸಿ ಹೆಚ್ಚಿನ ಮೊತ್ತದಲ್ಲಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದು.

## ನಿಗಮದಿಂದ ಮಂಜೂರು ಮಾಡಿದ ಸಾಲದ ಭದ್ರತೆಗೆ ಪಡೆಯಬೇಕಾದ ಭದ್ರತಾ ದಾಖಲಾತಿಗಳು.

ದಿನಾಂಕ 07/03/2003ರ ನಿಗಮದ ಸುತ್ತೋಲೆ ಸಂಖ್ಯೆ: ಕಹಿನಿ/ವ್ಯ/ಸಿಆರ್-100/2002-03ರನ್ವಯ ನಿಗದಿತ ಮೊತ್ತಗಳಿಗೆ ನಿಗದಿಪಡಿಸಿದ ದಸ್ತಾವೇಜುಗಳನ್ನು ಈ ಕೆಳಕಂಡಂತೆ ಪಡೆಯುವುದು.

1. ಪ್ರಾಮಿಸರಿ ನೋಟ್
2. ಡಿ.ಪಿ.ನೋಟ್ ಡೆಲಿವರಿ ಲೆಟರ್
3. ಲೆಟರ್ ಆಫ್ ರೀಪೆಮೆಂಟ್ - ಫಲಾನುಭವಿಯಿಂದ
4. ಹೈಪಾಥಿಕೇಷನ್ ಡೀಡ್
5. ಲೆಟರ್ ಆಫ್ ಗ್ಯಾರಂಟಿ - ಜಾಮೀನುದಾರರಿಂದ
6. ಮೆಮೊರೆಂಡಮ್ ಆಫ್ ಅಗ್ರಿಮೆಂಟ್ - ಸ್ವ ಸಹಾಯ ಗುಂಪುಗಳಿಂದ
7. ಸಹಾಯಧನ ವಿತರಣೆ ಪ್ರಮಾಣ ಪತ್ರ
8. ಸಹಾಯಧನ ಬಳಕೆ ಬಗ್ಗೆ ಸಾಲ ಪಡೆದವರಿಂದ ಘೋಷಣೆ.
9. ರೂ.50,000/-ಗಳಿಗಿಂತ ಹೆಚ್ಚಿನ ಸಾಲಕ್ಕೆ ಸ್ಥಿರಾಸ್ತಿ ಆಧಾರ ಮಾಡಿದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿದ (Registered) ದಾಖಲೆಗಳು.

**ವಿಮೆ.**

ನಿಗಮದ ಯೋಜನೆಗಳ ಸಾಲದಿಂದ ಉತ್ಪನ್ನವಾದ ಘಟಕ/ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಕಡ್ಡಾಯವಾಗಿ ವಿಮೆ ಮಾಡಿಸಬೇಕು. ವಿಮಾ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

## 2014-15ನೇ ಸಾಲಿನಲ್ಲಿ ವಿವಿಧ ಸಾಲದ ಯೋಜನೆಗಳ ಅನುಷ್ಠಾನದ ವೇಳಾಪಟ್ಟಿ

| ಕ್ರ ಸಂ | ವಿವರ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ | 02/06/2014 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ | 20/6/2014 |
| 3 | ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ನಿಗದಪಡಿಸಿದ ಕೊನೆಯ ದಿನಾಂಕ | 19/07/2014 |
| 4 | ಅರ್ಜಿಗಳ ಜಿಲ್ಲಾ ಆಯ್ಕೆ ಸಮಿತಿ ಮುಂದೆ ಮಂಡಿಸಲು (ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ) | 14/082014 |
| 5 | ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ ಅರ್ಜಿಗಳನ್ನು ಸಮಿತಿ ಅನುಮೋದನೆಯೊಂದಿಗೆ ಬ್ಯಾಂಕ್ ಗಳಿಗೆ ಶಿಫಾರಸ್ಸು ಮಾಡಲು ಕೊನೆಯ ದಿನಾಂಕ` | 30/08/2014 |
| 5 | ನಿಗಮದ ಇತರೆ ಸಾಲದ ಯೋಜನೆಗಳಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಮುಂದೆ ಮಂಡಿಸಲು ಕೊನೆಯ ದಿನಾಂಕ | 14/08/2014 |
| 6 | ಕೇಂದ್ರ ಕಚೇರಿ/ವಿಭಾಗೀಯ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | 20/09/2014 |
| 7 | ಹಣ ಬಿಡುಗಡೆ ಮಾಡಲು ಕೊನೆಯ ದಿನಾಂಕ | 31/10/2014 |
| 8 | ಜಿಲ್ಲಾ ಕಛೇರಿಯಲ್ಲಿ ಚೆಕ್ ಸ್ವೀಕರಿಸಿದ 15 ದಿನದೊಳಗಾಗಿ ಫಲಾನುಭವಿಗಳಿಗೆ ವಿತರಿಸುವುದು. | |
| 9 | ಚೆಕ್ ವಿತರಿಸಿದ ಒಂದು ತಿಂಗಳ ನಂತರ ಫಲಾನುಭವಿ ಸಾಲದ ಸದುಪಯೋಗ ಪಡಿಸಿಕೊಂಡು ಘಟಕ ಸ್ಥಾಪಿಸಿದ ಬಗ್ಗೆ ಪರಿಶೀಲನೆ ಮಾಡುವುದು. | |

## 2014-15ನೇ ಸಾಲಿನಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಅನುಷ್ಠಾನದ ವೇಳಾಪಟ್ಟಿ

| ಕ್ರ ಸಂ | ವಿವರ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ | 02/06/2014 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ | 20/06/2014 |
| 3 | ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 19/07/2014 |
| 4 | ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಮುಂದೆ ಮಂಡಿಸಲು ಕೊನೆಯ ದಿನಾಂಕ | 14/08/2014 |
| 5 | ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಹಾಗೂ ಅರ್ಹತೆ | 15/09/2014 |

| | | |
|---|---|---|
| | ಬಗ್ಗೆ ಪರಿಶೀಲನೆ | |
| 6 | ಆಯ್ಕೆ ಸಮಿತಿ ಆಯ್ಕೆ ಮಾಡಿದ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಅನುಮೋದನೆಗೆ ಸಲ್ಲಿಸುವುದು. | 30/09/2014 |
| 7 | ಕೇಂದ್ರ ಕಛೇರಿಯಿಂದ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡುವುದು | 31/10/2014 |
| 8 | ಭೂ ವಿಜ್ಞಾನಿಗಳಿಂದ ಜಲಬಿಂಧು ಗುರುತಿಸುವಿಕೆ ಹಾಗೂ ಕೊಳವೆ ಬಾವಿ ಕೊರೆಯಿಸುವುದು. | ನವೆಂಬರ್-2014 ಮತ್ತು ಡಿಸೆಂಬರ್-14 |
| 9 | ಪಂಪ್ ಸೆಟ್ ಮತ್ತು ಉಪಕರಣಗಳ ಸರಬರಾಜು ಹಾಗೂ ವಿದ್ಯುದ್ದೀಕರಣಕ್ಕೆ ಕ್ರಮ ವಹಿಸುವುದು. | ಜನವರಿ-15 ಮತ್ತು ಫೆಬ್ರವರಿ-15ರಲ್ಲಿ |

**ಯೋಜನೆಗಳನ್ನು ಯಶಸ್ವಿಗೊಳಿಸಲು ಅನುಸರಿಸಬೇಕಾದ ಕ್ರಮಗಳು:**

**ಸಂವಾದ:** ನಿಗಮದ ಯೋಜನೆಗಳ ಬಗ್ಗೆ ಅರಿವು ಹಾಗೂ ಅನುಷ್ಠಾನದಲ್ಲಿನ ನ್ಯೂನತೆ ಮತ್ತು ಕೊರತೆಗಳನ್ನು ತಿಳಿಯಲು ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ "ಸಂವಾದ" ಕಾರ್ಯಕ್ರಮಗಳನ್ನು ಮತ್ತು ಕುಂದುಕೊರತೆ ನಿವಾರಣಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಹಮ್ಮಿಕೊಳ್ಳುವುದು ಹಾಗೂ ನಿಗಮಕ್ಕೆ ವರದಿ ಮಾಡುವುದು.

**ಸಾಲ ವಿತರಣಾ ಪೂರ್ವ ಸಮಾಲೋಚನೆ:** ಸಾಲ ಪಡೆಯಲು ಪೂರಕ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡಲು, ಸಾಲ ಮತ್ತು ಸಬ್ಸಿಡಿಯ ಮಹತ್ವವನ್ನು ತಿಳಿಸಲು, ಸಾಲ ಸದುಪಯೋಗದ ಬಗ್ಗೆ ತಿಳಿಸಲು ಅವರ ಸಾಲಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ತಿಳಿಸಲು, ಕಡ್ಡಾಯವಾಗಿ ಸಾಲ ವಿತರಣಾ ಪೂರ್ವ ಸಮಾಲೋಚನೆಯನ್ನು ನಿರಂತರವಾಗಿ ಹಮ್ಮಿಕೊಳ್ಳುವುದು.

**ಸಾಲ ವಿತರಣೋತ್ತರ ಪರ್ಯಾಲೋಚನೆ:-** ಸಾಲ ದುರುಪಯೋಗವಾಗುವುದು ತಡೆಗಟ್ಟಲು ಯೋಜನೆಯ ಅನುಷ್ಠಾನ ಮತ್ತು ಘಟಕ ಸ್ಥಾಪನೆಯ ಬಗ್ಗೆ ನ್ಯೂನ್ಯತೆ ಮತ್ತು ಕೊರತೆಗಳ ಬಗ್ಗೆ ತಿಳಿಯಲು ಸಾಲ ಪಡೆದ ಫಲಾನುಭವಿಗಳೊಂದಿಗೆ ಪರ್ಯಾಲೋಚನಾ ಸಭೆಗಳನ್ನು ನಡೆಸುವುದು ಮತ್ತು ಘಟಕಗಳನ್ನು ತಪಾಸಿಸಿ ಸೂಕ್ತ ತಿಳುವಳಿಕೆಯನ್ನು ಫಲಾನುಭವಿಗಳಿಗೆ ನೀಡುವುದು.

## ಸಾಲ ವಸೂಲಾತಿ ಕಾರ್ಯಕ್ರಮ

- ದಿನಾಂಕ 13/05/2013ರವರೆಗೆ ಸಾಲ ಪಡೆದು ವಸೂಲಾತಿಗೆ ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿರುತ್ತದೆ. ಇವುಗಳನ್ನು ಹೊರತುಪಡಿಸಿ ಉಳಿದ ಖಾತೆಗಳಿಂದ ನಿಗದಿಪಡಿಸಿದ ಕಂತುಗಳನ್ವಯ ಸಾಲ ವಸೂಲಾತಿ ಮಾಡಲು ಕಡ್ಡಾಯವಾಗಿ ಕ್ರಮಕೈಗೊಳ್ಳಬೇಕು.
- ನಿಗಮವು ಜಿಲ್ಲಾ ಕಛೇರಿಗೆ ಸರಬರಾಜು ಮಾಡುವ ಕಂಪ್ಯೂಟರ್ ಗಳನ್ನು ಇಲ್ಲವೇ ಜಿಲ್ಲಾ ಪಂಚಾಯತ್ ಒದಗಿಸಿರುವ ಕಂಪ್ಯೂಟರ್ ಗಳನ್ನು ಉಪಯೋಗಿಸಿ, ಸಾಲದ ಖಾತೆಗಳನ್ನು ಕಂಪ್ಯೂಟರೀಕರಣ ಮಾಡುವುದು. ಆಗಿಂದ್ದಾಗೆ ಪಡೆದ ಮರುಪಾವತಿ ಮೊತ್ತವನ್ನು ಗಣಕೀಕೃತಗೊಳಿಸ ಫಲಾನುಭವಿಯ ಬಾಕಿ ಮೊತ್ತ ಬರುವಂತೆ ಸಿದ್ದಪಡಿಸಿಕೊಂಡು ನೋಟೀಸ್ ಜಾರಿ ಮಾಡುವುದು.
- ಒಂದೆರಡು ನೋಟೀಸ್ ಗಳಿಗೆ ಫಲಾನುಭವಿಗಳು ಪ್ರತಿಕ್ರಿಯಿಸದಿದ್ದರೆ, ಅಂತಿಮ ನೋಟೀಸ್ ಅನ್ನು ಜಾರಿ ಮಾಡುವುದು ಮತ್ತು ಸ್ಥಳ, ದಿನಾಂಕ ಮತ್ತು ವೇಳೆಯನ್ನು ನಿಗದಿಪಡಿಸಿ ಸಂವಾದ ಕಾರ್ಯಕ್ರಮಗಳನ್ನು ಸಂಘಟಿಸಿ, ಸಾಲ ವಸೂಲಾತಿಗೆ ಫಲಾನುಭವಿಗಳ ಮನವೊಲಿಸಲು ಸಂಘಟಿತ ಕ್ರಮವಹಿಸುವುದು ಹಾಗೂ ನಿಗಮದ ಕರ್ತೃತ್ವ ಕ್ರಮಗಳನ್ನು ಫಲಾನುಭವಿಗಳಿಗೆ ತಿಳುವಳಿಕೆ ಮೂಡಿಸುವುದು.

- ಸಾಲ ಮರುಪಾವತಿ ತೀವ್ರಗೊಳಿಸಲು ಫಲಾನುಭವಿಯು ಗ್ರಾಮದಿಂದ ಜಿಲ್ಲಾ ಕಚೇರಿಗೆ ಬಂದು ಪಾವತಿಸುವಲ್ಲಿ ಅನಾನುಕೂಲವಾಗಿ ಮರುಪಾವತಿ ಮಾಡಲು ಆಸಕ್ತಿ ವಹಿಸದೇ ಇರಬಹುದು. ಆದ್ದರಿಂದ ಈಗಾಗಲೇ ತಿಳಿಸಿರುವಂತೆ ಪ್ರತಿ ತಾಲ್ಲೂಕಿಗೆ ವಾರದಲ್ಲಿ ಒಂದು ದಿನ ಹಾಗೂ ಸ್ಥಳವನ್ನು ನಿಗದಿಪಡಿಸಿಕೊಂಡು, ಆ ದಿನ ಕಡ್ಡಾಯವಾಗಿ ಜಿಲ್ಲಾ ವ್ಯವಸ್ಥಾಪಕರಾಗಲಿ ಅಥವಾ ಕಚೇರಿ ಸಿಬ್ಬಂದಿಯನ್ನು ನಿಯೋಜಿಸಿ ಮರುಪಾವತಿ ಸಂಗ್ರಹಿಸುವುದು. ಈ ಬಗ್ಗೆ ಎಲ್ಲಾ ಫಲಾನುಭವಿಗಳಿಗೆ ಪತ್ರ ಮುಖೇನ ತಿಳಿಸಬೇಕು. ಈ ರೀತಿ ಮರುಪಾವತಿ ಸಂಗ್ರಹಿಸುವ ಕಾರ್ಯ ನಿರ್ವಹಿಸಬೇಕು. ಜಿಲ್ಲಾ ವ್ಯವಸ್ಥಾಪಕರು ತಾಲ್ಲೂಕುವಾರು ಮರುಪಾವತಿ ಸಂಗ್ರಹಣೆ ದಿನಾಂಕಗಳ ಪಟ್ಟಿಯನ್ನು ಕಡ್ಡಾಯವಾಗಿ ಕೇಂದ್ರ/ವಿಭಾಗೀಯ ಕಚೇರಿಗೆ ಕಳುಹಿಸಬೇಕು.

****

.